ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕೋಲ್ಕತ್ತಾದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ (35 ಎಸೆತ, 93 ರನ್) ನಡೆಸಿದ ಫಿನ್ ಅಲೆನ್... ಕೆಕೆಆರ್ 20 ಓವರ್‌ನಲ್ಲಿ 2 ವಿಕೆಟ್ ನಷ್ಟಕ್ಕೆ 247 ರನ್ ಗಳಿಸಿದೆ.

17 ಮೇ 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 68 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಬಂಗಾರ ಖರೀದಿಗಿಂತ ಭಾರತವೇ ಬಂಗಾರವಾಗಲಿ » 2



ಅಭಿವೃದ್ಧಿ ಕಾಮಗಾರಿಗೆ ಆಗ್ರಹ » 3



ಖಜಾನೆ ಖಾಲಿಯಾದರೂ ಸಾಧನಾ ಸಮಾವೇಶ » 4

# ಬಿಡದಿ ಟೌನ್‌ಶಿಪ್: ತಾರಕಕ್ಕೇರಿದ ವಾಗ್ವಾದ

## ಅಚ್ಚರಿ ಮೂಡಿಸಿದ ಗೌಡರ ಪತ್ರ | ಡಿ.ಕೆ.ಶಿ. ವಿರುದ್ಧ ಪರೋಕ್ಷ ವಾಗ್ದಾಳಿ

• ಪ್ರಜೋದಯ ವರದಿ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆ ವಿಚಾರದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವೆ ಮುಸುಕಿನ ಗುದ್ದಾಟಜೋರಾಗಿರುವ ಮಧ್ಯೆಯೇ ಮಾಜಿಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಅಚ್ಚರಿ ಮೂಡಿಸಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಹೆಚ್.ಡಿ.ದೇವೇಗೌಡ ಅವರು, ರೈತರಿಂದ ಎರಡು ಏಟು ತಿನ್ನಲೂ ಸಿದ್ದರೆಂದು ಕೆಲವರು ಹೇಳಿದ್ದಾರೆ. ಅವರು ಮೊದಲು ಏಟು ತಿಂದು ಬರಲಿ ಆ ಮೇಲೆ ನಾನು ಅಲ್ಲಿಗೆ ಹೋಗುತ್ತೇನೆಂದು ಡಿ.ಕೆ.ಶಿವಕುಮಾರ್‌ಗೆ



ತಿರುಗೇಟು ನೀಡಿದ್ದಾರೆ.

ರೈತರ ಜಮೀನನ್ನು ಬಲವಂತದಿಂದ ಕಿತ್ತುಕೊಂಡು ದಂಧೆ ಮಾಡಲು ಹೊರಟಿದ್ದಾರೆ. ದಾಖಲೆ ಸಮೇತ ಏನೇನು ಆಗುತ್ತಿದೆ ಎನ್ನುವುದನ್ನು ವಿವರಿಸಬಲ್ಲೆ. ಬೆಂಗಳೂರು ನಗರದ ಒತ್ತಡ ಕಡಿಮೆ ಮಾಡಲು ಕುಮಾರಸ್ವಾಮಿ ಐದು ಟೌನ್‌ಶಿಪ್ ಮಾಡಲು ಹೊರಟಿದ್ದರು. ಸ್ಥಳೀಯರ ವಿರೋಧದಿಂದ ಯೋಜನೆ ಕೈಬಿಡಲಾಯಿತು ಎಂದರು.

ಸಿದ್ದರಾಮಯ್ಯ ನನ್ನ ಸ್ನೇಹಿತ ನಾನು ಹಿಂದೆ ಅಳುತ್ತಿದ್ದುದ್ದನ್ನು » ನಾಲ್ಕನೇ ಪುಟದಲ್ಲಿ

### ಸತ್ಯ ಶೋಧನ ಸಮಿತಿ ವರದಿ ದೇವರಿಗೆ ಗೊತ್ತು

ಕುಮಾರಸ್ವಾಮಿ ಜಮೀನು ಕೊಳ್ಳೆ ಹೊಡೆದಿದ್ದಾರೆಂದು ಕಾಂಗ್ರೆಸ್ ನಾಯಕರು ಊರೆಲ್ಲಾ ಸುದ್ದಿ ಮಾಡಿಕೊಂಡು ಬಂದರು. ಸತ್ಯಾಸತ್ಯತೆಯನ್ನು ಅರಿಯಲು ಸತ್ಯಶೋಧನ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ಏನು ವರದಿಯನ್ನು ನೀಡಿದೆ ಎನ್ನುವುದು ದೇವರೊಬ್ಬರಿಗೆ ಮಾತ್ರ ಗೊತ್ತು. ಬಿಡದಿ ಟೌನ್‌ಶಿಪ್‌ಗೆ ಜನರ ವಿರೋಧವಿದೆ. ಅಲ್ಲಿನ ಜನರಿಗೆ ಇದು ಬೇಕಿಲ್ಲ. ಹೀಗಾಗಿ, ಯೋಜನೆಯನ್ನು ಕೈಬಿಡಬೇಕೆಂದು ದೇವೇಗೌಡರು ಒತ್ತಾಯಿಸಿದ್ದಾರೆ.

### ಟೀಕೆ ಮಾಡುವುದೇ ಹೆಚ್.ಡಿ.ಕೆ. ಕೆಲಸ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅಸೂಯೆ ಹಾಗೂ ಹೊಟ್ಟೆ ಉರಿ ಇದೆ. ಬೇರೆಯವರ ಬಗ್ಗೆ ಟೀಕೆ ಮಾಡುವುದೇ ಅವರ ಕೆಲಸವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಾಗ್ದಾಳಿ ನಡೆಸಿದರು.

ರಿಯಲ್ ಎಸ್ಟೇಟ್ ಮೂಲಕ ಆಸ್ತಿ ಮಾಡಿಕೊಂಡಿರುವುದು ಕುಮಾರಸ್ವಾಮಿ ಅವರ ಕುಟುಂಬದವರು. ಪಿಆರ್‌ಆರ್ ರಸ್ತೆ ಭಾಗದಲ್ಲಿ ಹೆದರಿಸಿ ಆಸ್ತಿಗಳನ್ನು ಬರೆಸಿಕೊಳ್ಳುವ ಕೆಲಸವನ್ನು ಅವರ ಅಣ್ಣ ಮಾಡಿದ್ದಾರೆಂದು ತಿರುಗೇಟು ನೀಡಿದರು.

ಶುಲ್ಕ ಪಾವತಿಸಿ ಖಾತಾ ಬದಲಾವಣೆಗೆ ಮಾಡಿಕೊಳ್ಳಬೇಡಿ, ನಾವೇ ಅಧಿಕಾರಕ್ಕೆ ಬರುತ್ತೇವೆಂಬ ಹೆಚ್.ಡಿ.ಕೆ. ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಕುಮಾರಸ್ವಾಮಿ ಅವರು ಬರೀ ಹಗಲು ಗನಸು ಕಾಣುತ್ತಿರುತ್ತಾರೆ. ಬಿಡದಿ ಟೌನ್‌ಶಿಪ್ ಮಾಡುವುದು ಬೇಡ ಎಂದು ಹೇಳಿದ್ದಾರೆ. ಅದನ್ನು ಆರಂಭಿಸಿದ್ದು ಯಾರು. ಅವರೇ ಅಧಿಸೂಚನೆ ಹೊರಡಿಸಿದ್ದಾರೆ. ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿರುವವರು ಯಾರು. ಅವರ ಅಣ್ಣ ಪಿಆರ್ ಆರ್‌ರಸ್ತೆ ನೆಪದಲ್ಲಿ ರಿಯಲ್ ಎಸ್ಟೇಟ್ ದಂಧೆ ಮಾಡಿದ್ದಾರೆಂದು ಕಿಡಿಕಾರಿದರು. ಜನ್ಮದಿನಕ್ಕೆ ಅಧಿಕಾರ ಹಸ್ತಾಂತರವಾಗಲಿದೆ ಎಂದು ಕನಸುಕಾಣುತ್ತಿದ್ದರೆಂಬ ದೇವೇಗೌಡರ ಟೀಕೆ ಬಗ್ಗೆ ಪ್ರತಿಕ್ರಿಯಿಸಿ, ಅವರ ಮಗ ಅಧಿಕಾರ ಹಸ್ತಾಂತರ ವಿಚಾರದಲ್ಲಿ ಮಾಡಿದ್ದನ್ನು ಸ್ಮರಿಸಲಿ. ಆ ಮೇಲೆ ಬೇರೆ ವಿಚಾರದ ಬಗ್ಗೆ ಮಾತನಾಡಲಿ ಎಂದರು.

# ತಿಂಗಳಾಂತ್ಯಕ್ಕೆ ಸಂಪುಟ ಪುನರ್ ರಚನೆ: ವಿಶ್ವಾಸ

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶೀಘ್ರದಲ್ಲಿ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಲಿದ್ದು ಸಂಪುಟ ಪುನರ್ ರಚನೆ ಅಥವಾ ವಿಸ್ತರಣೆಯನ್ನು ಮೇ 30ರೊಳಗೆ ಮಾಡಬಹುದೆಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರು ಹೇಳಿದರು.

ಕೊಪ್ಪಳದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಿನ ಅವಧಿ ಪೂರ್ಣಗೊಳ್ಳುವ ತನಕ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ ಎನ್ನುವ ನಂಬಿಕೆ ನನ್ನದು. ಪದೇ ಪದೇ ಮುಖ್ಯಮಂತ್ರಿ ಬದಲಾವಣೆ ಮಾಡುವುದು ಸರಿಯಲ್ಲ. ಸಂಪುಟ ಪುನರ್ ರಚನೆಯಾದರೆ ಉಳಿದ ಎರಡು ವರ್ಷಗಳ ಅವಧಿಯಲ್ಲಿ ಪರಿಣಾಮಕಾರಿಯಾದ ಆಡಳಿತ ಜನರಿಗೆ ನೀಡಬಹುದು. ನಮ್ಮಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು 2028ರಲ್ಲಿಯೂ ಅಧಿಕಾರಕ್ಕೆ ಬರ



ಬಹುದೆಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವ ದಲ್ಲಿಯೇ ಮುಂಬರುವ ಚುನಾವಣೆ ಎದುರಿಸುತ್ತೇವೆ. ಸಿದ್ದರಾಮಯ್ಯ ಅವರಷ್ಟೇ ಆಡಳಿತದ ಅನುಭವ ಹೊಂದಿರುವ ಮಲ್ಲಿಕಾರ್ಜುನ ಖರ್ಗೆ ಅಂಥಹವರು ಮುಖ್ಯಮಂತ್ರಿ ಯಾಗಬೇಕೆಂದರು.

ಸಚಿವ ಸ್ಥಾನ ನೀಡುವಂತೆ ಕೇಳಿದ್ದೀರಾ ಎನ್ನುವ ಪ್ರಶ್ನೆಗೆ ದೇವರಾಣೆಗೂ ಕೇಳಿಲ್ಲ ಎಂದರು. ಪ್ರಧಾನಿ ನರೇಂದ್ರ ಮೋದಿ ಯುದ್ಧವನ್ನು ನೆಪವಾಗಿಟ್ಟುಕೊಂಡು ಪೆಟ್ರೋಲ್ ಹಾಗು ಡಿಸೇಲ್ ಬೆಲೆ ಹೆಚ್ಚಳ ಮಾಡಿದ್ದಾರೆ. ದೇಶದ ರೂಪಾಯಿ ಮೌಲ್ಯ ಕುಸಿತವಾಗಿದ್ದು ಮೋದಿ ಆಡಳಿತ ಸಂಪೂರ್ಣವಾಗಿ ವಿಫಲವಾಗಿದೆ. ಅವರು ರಾಜೀನಾಮೆ ಕೊಡಬೇಕು. ಆರ್ಥಿಕ ತಜ್ಞರೊಬ್ಬರು ಪ್ರಧಾನಿಯಾಗಬೇಕೆಂದು ಆಗ್ರಹಿಸಿದರು.

**ಶೀಘ್ರದಲ್ಲೇ ದೆಹಲಿ ಪ್ರವಾಸ**

ಪಂಚ ರಾಜ್ಯ ಚುನಾವಣೆ ಬಳಿಕ ರಾಜ್ಯ ನಾಯಕತ್ವ ಬದಲಾವಣೆ ವಿಚಾರ ಮುನ್ನೆಲೆಗೆ ಬರಬಹುದೆಂಬ ಸಾಧ್ಯತೆಗಳಿಗೆ ಪುಷ್ಟಿ ಎಂಬಂತೆ ನಾಯಕರು ದೆಹಲಿ ಪ್ರವಾಸಕ್ಕೆ ಸಜ್ಜಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶೀಘ್ರದಲ್ಲೇ ದೆಹಲಿ ಪ್ರವಾಸ ನಡೆಸಲಿದ್ದಾರೆ.

ರಾಜ್ಯ ಸರ್ಕಾರ ಮೇ 20ಕ್ಕೆ 3 ವರ್ಷ ಪೂರ್ಣಗೊಳಿಸಲಿದೆ. ಇನ್ನೇನು ಎರಡು ವರ್ಷಗಳ ಕಾಲ ಸರ್ಕಾರ ಜಾರಿಯಲ್ಲಿರುತ್ತದೆ. ಈ ಹಿನ್ನಲೆಯಲ್ಲಿ ನಾಯಕತ್ವ ಬದಲಾವಣೆ ವಿಚಾರವಾಗಿ ಶೀಘ್ರದಲ್ಲೇ ಒಂದು ತೀರ್ಮಾನಕ್ಕೆ ಬರಬೇಕು ಎಂಬುವುದು ಉಭಯ ನಾಯಕರ ಆಪ್ತರ ಅಭಿಪ್ರಾಯವಾಗಿದೆ.

## ಚಾಲಕನ ನಿರ್ಲಕ್ಷ್ಯ: ಪಲ್ಟಿಯಾದ ಸಾರಿಗೆ ಬಸ್

• ಪ್ರಜೋದಯ ವರದಿ



**ಅರಸೀಕೆರೆ:** ಚಾಲಕನ ನಿಯಂತ್ರಣ ತಪ್ಪಿ ಕೆಎಸ್‌ಆರ್‌ಟಿಸಿ ಬಸ್ ರಸ್ತೆ ಪಕ್ಕದ ಜಮೀನಿ ನಲ್ಲಿ ಪಲ್ಟಿಯಾಗಿರುವ ಘಟನೆ ತಾಲ್ಲೂಕಿನ ಯರೇಹಳ್ಳಿ ಸಮೀಪ ನಡೆದಿದೆ.

ಅರಸೀಕೆರೆಯಿಂದ ಬೆಂಗಳೂರಿಗೆ ಬಸ್ ತೆರಳುತ್ತಿತ್ತು. 25 ಪ್ರಯಾಣಿಕರು ಇದ್ದರು. ಬಸ್ ವೇಗ ನಿಯಂತ್ರಣದಲ್ಲಿದ್ದ ಪರಿಣಾಮ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಬಸ್ ಚಾಲಕ ನಿದ್ರೆ ಮಂಪರಿನಲ್ಲಿ ಇದ್ದುದರಿಂದ ಅವಘಡ ಸಂಭವಿಸಿದೆ ಎನ್ನಲಾಗಿದೆ. ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

**ಕಾರು-ಬೈಕ್ ಡಿಕ್ಕಿ**

ಅರಸೀಕೆರೆ ತಾಲ್ಲೂಕು ಬಂಡಿಹಳ್ಳಿ ಗೇಟ್ ಬಳಿ ಕಾರು ಬೈಕ್ ನಡುವೆ ಡಿಕ್ಕಿಯಾಗಿ ಬೈಕ್ ಸವಾರನ ಕಾಲಿಗೆ ಪೆಟ್ಟಾಗಿದೆ.

ಚೌಡಿನಹಳ್ಳಿ ನಿವಾಸಿ ಜಗದೀಶ್ ಅರವಿಂದ್ ಗಾರ್ಮೆಂಟ್ಸ್ ನೌಕರನಾಗಿದ್ದು, ಕೆಲಸಕ್ಕೆ ಬರುವಾಗ ಶಿವಮೊಗ್ಗಾ ಕಡೆಯಿಂದ ಬಂದ ಕಾರು ಬೈಕ್‌ಗೆ ಡಿಕ್ಕಿಯಾಗಿದೆ. ಬೈಕ್ ಸವಾರ ರಸ್ತೆಗೆ ಬಿದ್ದು ಕಾಲಿಗೆ ಪೆಟ್ಟಾಗಿದೆ. ಅದೇ ರಸ್ತೆಯಲ್ಲಿ ತೆರಳುತ್ತಿದ್ದ ಗಾರ್ಮೆಂಟ್ಸ್ ನೌಕರರು ಗಾಯಾಳು ವನ್ನು ಡಿಕ್ಕಿ ಹೊಡೆದ ಕಾರಿನಲ್ಲೇ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರು.

**ಬೈಕ್ ಸವಾರ ಸಾವು**

ಗೂಡ್ಸ್ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಅರಕಲಗೂಡು ತಾಲ್ಲೂಕಿನ ರಾಮನಾಥಪುರದಲ್ಲಿ ನಡೆದಿದೆ.

ರಾಮನಾಥಪುರದ ಶಿವಮೂರ್ತಿ ಮೃತರು. ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ಪಟ್ಟಣದ ಬಸ್ ನಿಲ್ದಾಣ ಎದುರು ಅತಿವೇಗದಿಂದ ಬಂದ ಗೂಡ್ಸ್ ಚಾಲಕ ಡಿಕ್ಕಿ ಮಾಡಿದ್ದಾನೆ. ಅಪಘಾತದ ರಭಸಕ್ಕೆ ತೀವ್ರ ರಕ್ತಸ್ರಾವವಾಗಿ ಶಿವಮೂರ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜನಸ್ಪಂದನಾ ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿಗಳು

## ಉಸ್ತುವಾರಿ ಸಚಿವ ಕೃಷ್ಣಬೈರೇಗೌಡರಿಂದ ತರಾಟೆ | ಐದಾರು ತಿಂಗಳು ಕಳೆದರೂ ನಿರ್ಲಕ್ಷ್ಯಕ್ಕೆ ಅಸಮಾಧಾನ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಜನಸ್ಪಂದನಾ ಸಭೆಗೆ ಚಾಲನೆ ನೀಡಿ ಐದಾರು ತಿಂಗಳು ಕಳೆದರೂ ಅದೇ ಸಮಸ್ಯೆಗಳು ನಮ್ಮ ಬಳಿ ಬರುತ್ತಿವೆ. ಜೊತೆಗೆ ಸಮಸ್ಯೆಗಳು ಇನ್ನೂ ಹೆಚ್ಚಾಗುತ್ತಿವೆ. ಹಾಗಾದರೆ ನೀವೇನು ಕೆಲಸ ಮಾಡುತ್ತಿದ್ದೀರಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ನಡೆದ ಜನಸ್ಪಂದನಾ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಸ್ವೀಕೃತವಾಗಿರುವ ಅರ್ಜಿಗಳ ವಿಲೇವಾರಿ ಕುರಿತು ಅಧಿಕಾರಿಗಳೊಂದಿಗೆ ಶನಿವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ದೂರು ಸ್ವೀಕಾರ ಮಾಡಿ ತಿಂಗಳುಗಳೇ ಕಳೆದರೂ ಸಮಸ್ಯೆ ಇನ್ನೂ ಏಕೆ ಬಗೆಹರಿದಿಲ್ಲ ಎಂಬುದು ನನಗೆ ಅರ್ಥವಾ ಗುತ್ತಿಲ್ಲ. ಅಧಿಕಾರಿಗಳು ಅದನ್ನು ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷ್ಯ ವಹಿಸಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜನಸಾಮಾನ್ಯರು, ಬಡವರು ತಮ್ಮ ಸಮಸ್ಯೆ ಪರಿಹಾರಕ್ಕಾಗಿ ಕಚೇರಿಯಿಂದ ಕಚೇರಿಗೆ ಅಲೆದು ಸುಸ್ತಾಗುತ್ತಿದ್ದಾರೆ. ಈ ಬಗ್ಗೆ ಮಾಹಿತಿ ಇದ್ದರೂ ಅಧಿಕಾರಿಗಳು ಸೂಕ್ತ ಸ್ಪಂದನೆ ನೀಡಿಲ್ಲ. ಹಾಗಾದರೆ ಜನಸ್ಪಂದನಾ ಸಭೆ ನಡೆಸಿದ ಪ್ರಯೋಜನವೇನು. ಯಾವುದೇ ಸಮಸ್ಯೆಗಳಿದ್ದರೂ ನಿರ್ಲಕ್ಷ್ಯ ತೋರದೆ ಆಗುವುದ್ದಾದರೆ ಮಾಡಿಕೊಡಬೇಕು. ಇಲ್ಲದಿದ್ದರೆ ಯಾವ ಕಾರಣಕ್ಕೆ ಆಗುವುದಿಲ್ಲ ಎಂದು ತಿಳಿಸಿ, ಅರ್ಜಿ ವಿಲೇವಾರಿ ಮಾಡಿ ಎಂದು ಹೇಳಿದರು.

ಮೊದಲಿಗೆ ಸಕಲೇಶಪುರ ತಹಶೀಲ್ದಾರ್ ಸುಪ್ರಿತಾ ಹಾಗು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಗಂಗಾಧರ್ ಅವರನ್ನು ಪ್ರಶ್ನಿಸಿದ ಸಚಿವರು, 4 ತಿಂಗಳಿನಿಂದ



ಬಂದಿರುವ ಅರ್ಜಿಗಳಲ್ಲಿ ಎಷ್ಟು ವಿಲೇವಾರಿ ಮಾಡಿದ್ದೀರಿ ಎಂಬ ಸ್ಪಷ್ಟ ಮಾಹಿತಿ ನೀಡಬೇಕು. ಕೇವಲ ಕಚೇರಿಯಲ್ಲಿ ಕುಳಿತುಕೊಳ್ಳುವುದಲ್ಲ, ಜನರ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡಬೇಕೆಂದು ಸೂಚಿಸಿದರು.

ಆರ್‌ಆರ್‌ಟಿ ಮತ್ತು 94-ಸಿ ಸಂಬಂಧಿತ ಅರ್ಜಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದು, ತ್ವರಿತವಾಗಿ ಇತ್ಯರ್ಥ ಪಡಿಸಬೇಕು. ದುರಸ್ತಿ, ದಾರಿ ಸಮಸ್ಯೆ ಹಾಗು ನಕಾಶೆಯಲ್ಲಿ ದಾಖಲಾಗಿ ರುವ ರಸ್ತೆ ಒತ್ತುವರಿ ತೆರವು ಕುರಿತು ಬಂದಿರುವ ಅರ್ಜಿಗಳ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದರು.

ಇಒ ಗಂಗಾಧರ್ ಅವರು ಸರಿಯಾದ ಮಾಹಿತಿ ನೀಡದೇ ಇದ್ದಾಗ ಅಸಮಾಧಾನ ಗೊಂಡ ಸಚಿವರು, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಠಾಣಾ ಜಾಗ ಒತ್ತುವರಿ ಬಗ್ಗೆ ಏಕೆ ಕ್ರಮ ಕೈಗೊಂಡಿಲ್ಲ, ಜನರು ಎಷ್ಟು ಬಾರಿ ಕಚೇರಿಗೆ ಅಲೆದಾಡಬೇಕೆಂದು ಸಚಿವರು ಖಾರವಾಗಿ ಪ್ರಶ್ನಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಗಂಗಾಧರ್, ಶೀಘ್ರ ಇತ್ಯರ್ಥ ಪಡಿಸುವುದಾಗಿ ಹೇಳಿದರು. ಅದಕ್ಕೆ ಪ್ರತಿಕ್ರಿಯಿಸಿದ ಸಚಿವರು 4 ತಿಂಗಳಿನಿಂದ ಆಗದ ಕೆಲಸ ಈಗ ಹೇಗೆ ಸಾಧ್ಯ ಎಂದು ಸಿಟ್ಟಾದರು.

**ದಾರಿ ಬಿಡಿಸಲು ಕ್ರಮ ವಹಿಸಿ**

ಜಮೀನಿಗೆ ತೆರಳಲು ನಕಾಶೆ, ಬಂಡಿ ದಾರಿಗಳನ್ನು ಬಿಡಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳ ಬೇಕು. ಯಾರದೋ ಮುಲಾಜಿಗೆ ಅಧಿಕಾರಿಗಳು ಒಳಗಾಗಬಾರದು. ವೈಯಕ್ತಿಕ ಅಥವಾ ರಾಜಕೀಯ ಯಾವುದೇ ಉದ್ದೇಶ ಇದ್ದರೂ ಆ ಬಗ್ಗೆ ಗಮನ ಹರಿಸದೆ ನಿಮ್ಮ ಕೆಲಸವನ್ನು ನೀವು ಮಾಡಿಕೊಂಡು ಹೋಗಿ. ಖಾಸಗಿ ಜಮೀನಿನಲ್ಲೂ ಗೊಬ್ಬರ, ಬಿತ್ತನೆ ಬೀಜ, ಫಸಲನ್ನು ಸಾಗಿಸಲು ಅವಕಾಶ ನೀಡಬಹುದು ಈ ಬಗ್ಗೆ ರೈತರಿಗೆ ಮಾಹಿತಿ ನೀಡಿ ಎಂದು ತಿಳಿಸಿದರು.

**ರೋಗ ಬಾರದಂತೆ ಮುಂಜಾಗ್ರತಾ ಕ್ರಮ**

ಕೃಷಿ ಇಲಾಖೆ ಜಂಟಿ ನಿರ್ದೇಶಕ ರಮೇಶ್ ಕುಮಾರ್ ಅವರು ಮಾತನಾಡಿ, » ನಾಲ್ಕನೇ ಪುಟದಲ್ಲಿ

### 4,538 ಅರ್ಜಿಯಲ್ಲಿ 4,444 ವಿಲೇವಾರಿ

ಜಿಲ್ಲೆಯಲ್ಲಿ ಈವರೆಗೆ ನಡೆದಿರುವ ನಾಲ್ಕು ಜನಸ್ಪಂದನಾ ಸಭೆಯಲ್ಲಿ ಒಟ್ಟು 4,538 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಆ ಪೈಕಿ 4,444 ಅರ್ಜಿಗಳನ್ನು ವಿಲೇವಾರಿ ಮಾಡಿ, 94 ಅರ್ಜಿಗಳು ಬಾಕಿ ಉಳಿದಿವೆ. ಅವುಗಳನ್ನು ಮರು ಪರಿಶೀಲನೆಗೆ ಸೂಚಿಸಲಾಗಿದೆ. ಗ್ರಾಮಾಂತರ ಮಟ್ಟದಲ್ಲಿ ಇ-ಸ್ವತ್ತು ಸಮಸ್ಯೆ ನಿವಾರಣೆಗೆ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ಸೂಚನೆ ನೀಡಿದ್ದೇನೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ತಿಳಿಸಿದರು.

### ಜಿಮ್‌ನಲ್ಲಿ ಯುವಕನಿಗೆ ಹೊಡೆದಿದ್ದ ಆರೋಪಿ ಬಂಧನ

• ಪ್ರಜೋದಯ ವರದಿ



**ಹಾಸನ:** ಜಿಮ್‌ನಲ್ಲಿ ಭುಜ ತಾಗಿತೆಂದು ಯುವಕನನ್ನು ಬಲವಾಗಿ ಹೊಡೆದಿದ್ದ ಆರೋಪಿಯನ್ನು ಶನಿವಾರ ಬಡಾವಣೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರದ ಎಂ.ಜೆ.ಫಿಟ್ನೆಸ್‌ನಲ್ಲಿ ಇತ್ತೀಚೆಗೆ ಘಟನೆ ನಡೆದಿತ್ತು. ಶಿವಮೊಗ್ಗಾ ಮೂಲದ ಕೀರ್ತನ್ ಎಂಬಾತನ ಮೇಲೆ ನಗರದ ವರುಣ್ ಹಲ್ಲೆ ಮಾಡಿದ್ದ. ಜಿಮ್‌ನಲ್ಲಿ ನಡೆದು ಹೋಗುತ್ತಿದ್ದಾಗ ಭುಜ ತಾಗಿದ್ದಕ್ಕೆ ಇಬ್ಬರ ನಡುವೆ ವಾಗ್ವಾದ ಶುರುವಾಗಿತ್ತು. ಆಕ್ರೋಶದಲ್ಲಿ ವರುಣ್ ಜೋರಾಗಿ ಬಲ ಭುಜಕ್ಕೆ ಹೊಡೆದು ಗಂಭೀರ ಗಾಯಗೊಳಿಸಿದ್ದ. ಕೀರ್ತನ್‌ನ್ನು ನಗರದ ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಪಡಿಸಲಾಗಿದೆ. ವರುಣ್ ಹಲ್ಲೆ ಮಾಡಿದ್ದ ವಿಡಿಯೋ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಬೆಂಗಳೂರಿನಲ್ಲಿ ತಲೆ ಮರೆಸಿಕೊಂಡಿದ್ದ ವರುಣ್‌ನನ್ನು ಬಡಾವಣೆ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

## ನಾಳೆ ದೇವೇಗೌಡರ ಹುಟ್ಟುಹಬ್ಬ ಆಚರಣೆ: ಸ್ವರೂಪ್

• ಪ್ರಜೋದಯ ವರದಿ

**ಹಾಸನ:** ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಮೇ 18ರಂದು 94ನೇ ವಸಂತಕ್ಕೆ ಕಾಲಿಡುತ್ತಿದ್ದು, ಈ ಸಂದರ್ಭದಲ್ಲಿ ನಗರದಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಹಾಗು ಅಭಿಮಾನಿಗಳು ಸೇರಿ ಮೊದಲು ನಗರದ ನೀಲುವಾಗಿಲು ಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಈಡುಗಾಯಿ ಒಡೆದು, ಬಂದವರಿಗೆ ಸಿಹಿ ಹಂಚಲಾಗುವುದು. ನಂತರ ದರ್ಗಾದಲ್ಲೂ ವಿಶೇಷ ಪ್ರಾರ್ಥನೆ ಸಲ್ಲಿಸಿ ದೇವೇಗೌಡರಿಗೆ ಇನ್ನಷ್ಟು ಆಯಸ್ಸು-ಆರೋಗ್ಯ ಸಿಗಲಿ ಎಂದು ಬೇಡಿಕೊಳ್ಳಲಾಗುವುದು ಎಂದು ಹೇಳಿದರು.

ಬಳಿಕ ಎನ್.ಆರ್.ವೃತ್ತದಲ್ಲಿ ದೇವೇಗೌಡರ ಬೃಹತ್ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ನೆರ





ವೇರಿಸಲಾಗುವುದು. ನಗರದ ಹೊರ ವಲಯದ ಕಾಮಧೇನು ಚೈತನ್ಯ ವೃದ್ಧಾಶ್ರಮದ ನಿವಾಸಿಗಳಿಗೆ ಹಣ್ಣು ಹಂಪಲು ವಿತರಿಸಲಾಗುವುದು. ಈ ಕಾರ್ಯಕ್ರಮಕ್ಕೆ ದೇವೇಗೌಡರ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

6 ದಶಕಗಳಿಗೂ ಹೆಚ್ಚು ಕಾಲ ಸಕ್ರಿಯ ರಾಜಕೀಯದಲ್ಲಿದ್ದು, ಜಿಲ್ಲೆ ಮಾತ್ರವಲ್ಲದೆ ನಾಡು-ನುಡಿ, ನೀರಾವರಿ ಮೊದಲಾದ ಸಮಸ್ಯೆಗಳಿಗೆ ಅವಿರತವಾಗಿ ಹೋರಾಟ ಮಾಡುತ್ತಾ ಬಂದಿರುವ ದೇವೇಗೌಡರು, ಇಳಿ ವಯಸ್ಸಿನಲ್ಲೂ ತವರು ಜಿಲ್ಲೆಗೆ, ರಾಜ್ಯಕ್ಕೆ ಏನಾದರೂ ಮಾಡಬೇಕೆಂದು ಚಿಂತಿಸುತ್ತಿದ್ದಾರೆ. ಅವರ ಅನುಭವ, ಮಾರ್ಗದರ್ಶನ, ಸಲಹೆ ಸೂಚನೆ ನಮ್ಮ ನಾಡಿಗೆ ಅತ್ಯವಶ್ಯವಾಗಿದೆ. ಹೀಗಾಗಿ ಅವರು ನಮ್ಮ ನಡುವೆ ನೂರು ಕಾಲ ಬದುಕಬೇಕು. ನಮ್ಮೆಲ್ಲರಿಗೂ ಮಾರ್ಗದರ್ಶನ ನೀಡಬೇಕೆಂದು ಕೋರಿ ದೇವರಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್. ದ್ಯಾವೇಗೌಡ, ಜಿಲ್ಲಾ ಜೆಡಿಎಸ್ ವಕ್ತಾರ ರಘು ಹೊಂಗೆರೆ, ಮುಖಂಡರಾದ ಶೇಷಾದ್ರಿ, ಸಾಲಗಾಮೆ ಶಿವಣ್ಣ, ರಂಗಶೆಟ್ಟಿ, ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿದಿರೆಕೆರೆ ಜಯರಾಂ ಇದ್ದರು.

# ಜನರ ಮೇಲೆ ಬೆಲೆ ಏರಿಕೆ ಗದಾಪ್ರಹಾರ

## ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಿ.ಎಸ್.ಉಗ್ರಪ್ಪ ವಾಗ್ದಾಳಿ

• ಪ್ರಜೋದಯ ವರದಿ

**ಹಾಸನ:** ಅಚ್ಛೇ ದಿನ್ ಬರುತ್ತದೆ ಎಂದು ಹೇಳಿದ್ದ ಪ್ರಧಾನಿ ನರೇಂದ್ರ ಮೋದಿ, ಈಗ ಜನರ ಮೇಲೆಯೇ ಬೆಲೆ ಏರಿಕೆಯ ಗದಾಪ್ರಹಾರ ಮಾಡಲಾಗುತ್ತಿದ್ದಾರೆಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಅವರು ಪ್ರಧಾನಿ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದರು.



ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿನ್ನ, ಬೆಳ್ಳಿ ಖರೀದಿಸಬೇಡಿ ಎಂದು ಹೇಳುತ್ತಾರೆ. ಮದುವೆಗೆ ತಾಳಿ, ಕಾಲುಂಗುರ ಬೇಕಲ್ಲವೇ. ಮೋದಿಗೆ ಸಾಂಸಾರಿಕ ಬದುಕಿನ ಅರ್ಥವೇ ಗೊತ್ತಿಲ್ಲ. ವರ್ಕ್ ಫ್ರಂ ಹೋಂ ರೈತರು ಹೇಗೆ ಮಾಡುತ್ತಾರೆ. ಕೇಂದ್ರ ಸರ್ಕಾರ ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಜನರ ಮೇಲೆ ಬೆಲೆ ಏರಿಕೆ ಹೊರೆ ಹಾಕುತ್ತಿದೆಂದು ದೂರಿದರು.

ಆರ್ಥಿಕ ಸಮಸ್ಯೆ ಬಗ್ಗೆ ದೇಶದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿತ್ತಲ್ಲವಾ. ವಿಶೇಷ ಅಧಿವೇಶನ ಕರೆದು ಆರ್ಥಿಕ ತಜ್ಞರ ಜೊತೆ ಚರ್ಚೆ ಮಾಡಬೇಕಿತ್ತಲ್ಲವಾ. ಇದ್ಯಾವುದನ್ನೂ ಮಾಡದೆ ಆರ್‌ಎಸ್‌ಎಸ್ ಹೇಳಿದಂತೆ ನೀವು ಘೋಷಣೆ ಮಾಡಲಾಗಿದೆ. ದೇಶದ ಸಾಮರಸ್ಯ ಹಾಗು ಆರ್ಥಿಕತೆಯನ್ನು ಹಾಳು ಮಾಡಿದ್ದಾರೆ. ರೈತರು ಹಾಗು ಜನರ ಮೇಲೆ ನಿರ್ಬಂಧ ಹೇರಿ ಕೊಂಡು ಆರ್ಥಿಕತೆಯನ್ನು ಕೆಟ್ಟ ಸ್ಥಿತಿಗೆ ತಂದವರು ಮಿಸ್ಟರ್ ಮೋದಿ ಎಂದು ಆರೋಪಿಸಿದರು.

ಈ ವೇಳೆ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರ ಪ್ರಸ್ತಾಪಿಸಿದ ಅವರು, ನಿಮ್ಮ ವೈಫಲ್ಯದಿಂದ ನೀಟ್ ಪರೀಕ್ಷೆ ಪ್ರಶ್ನೆಪತ್ರಿಕೆ ಲೀಕ್ ಆಯಿತು. ಹಗಲು-ರಾತ್ರಿ ಓದಿದ ಮಕ್ಕಳಿಗೆ ಅನ್ಯಾಯವಾಗಿದೆ. ಅದರ ನೈತಿಕ ಹೊಣೆ ಯಾರು ಹೊರುತ್ತಾರೆಂದು ಪ್ರಶ್ನಿಸಿದ ಅವರು, ನಿಮಗೆ ಸ್ವಲ್ಪವಾದರೂ ಬದ್ಧತೆ ಇದ್ದರೆ ದೇಶದ ಜನರ ಕ್ಷಮೆ ಯಾಚಿಸಿ, ಬೆಲೆ ಏರಿಕೆ ಕ್ರಮವನ್ನು ವಾಪಾಸ್ ಪಡೆಯಬೇಕೆಂದು ಆಗ್ರಹಿಸಿದರು.

## ಉದ್ಯಮದಲ್ಲಿ ಯಶಸ್ಸು ಕಾಣಲು ಪರಿಶ್ರಮ ಅತ್ಯವಶ್ಯ

• ಪ್ರಜೋದಯ ವರದಿ

**ಹಾಸನ:** ಪ್ರಸ್ತುತ ಸ್ಪರ್ಧಾತ್ಮಕ ಯುಗದಲ್ಲಿ ಉದ್ಯಮಿಯಾಗಿ ಬೆಳೆಯಬೇಕೆಂದರೆ ತಾಳ್ಮೆ, ಪರಿಶ್ರಮ ಹಾಗು ಸರಿಯಾದ ಯೋಜನೆಗಳಿರಬೇಕೆಂದು ಪುಷ್ಪಗಿರಿ ಮಹಾಸಂಸ್ಥಾನ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಅವರು ಹೇಳಿದರು.

ನಗರದ ಬಸವೇಶ್ವರ ದೇವಾಲಯ ಆವರಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗು ಜಿಲ್ಲಾ ವೀರಶೈವ ಲಿಂಗಾಯತ ಸಂಘದಿಂದ ಹಮ್ಮಿಕೊಂಡಿದ್ದ ವೀರಶೈವ ಲಿಂಗಾಯತ ಬ್ಯುಸಿನೆಸ್ ಎಕ್ಸ್‌ಪೋ 2026ರ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಯಶಸ್ವಿ ಉದ್ಯಮಿಯಾಗುವ ಎಲ್ಲಾ ಜ್ಞಾನ, ಶಕ್ತಿ ನಮ್ಮಲ್ಲಿರುತ್ತದೆ. ಅದನ್ನು ಸರಿಯಾಗಿ ಬಳಸಿಕೊಳ್ಳದ ಹೊರತು ನಷ್ಟ ಅನುಭವಿಸಬೇಕಾಗುತ್ತದೆ. ವ್ಯಾಪಾರದಲ್ಲಿ ಪ್ರಗತಿ ಕಂಡು ಕೆಲವರು ಶ್ರೀಮಂತರಾದರೆ ಮತ್ತೆ ಹಲವರು ನಷ್ಟದಿಂದ ಸಂಕಷ್ಟಕ್ಕೆ ಸಿಲುಕುತ್ತಾರೆ. ಆದ್ದರಿಂದ ಯಾವುದೇ ನೂತನ



ಯೋಜನೆಗೆ ಕೈ ಹಾಕಬೇಕೆಂದರೆ ಪೂರ್ವ ತಯಾರಿ ಇರಬೇಕೆಂದರು.

ವ್ಯಾಪಾರದಲ್ಲಿ ನಿರಂತರ ನಷ್ಟವಾಗುತ್ತಿದೆ ಎಂದರೆ ಅಲ್ಲಿ ಆಗುತ್ತಿರುವ ತಪ್ಪುಗಳನ್ನು ಅರಿತು ಸರಿಪಡಿಸಿಕೊಳ್ಳಬೇಕು. ರಾಜ್ಯದಲ್ಲಿ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಇದೆಯಾದರೂ ಯಾವುದೇ ಚಟುವಟಿಕೆಗಳು ನಡೆಯುತ್ತಿಲ್ಲ. ಮಹಾಸಭಾದ ಪದಾಧಿಕಾರಿಗಳು ನಿಗಮವನ್ನು ನಿದ್ರೆಯಿಂದ ಎಬ್ಬಿಸುವ ಕೆಲಸ ಮಾಡಬೇಕು. ಸಮಾಜದ ಬಡವರಿಗೆ ಸಾಲ ಸೌಲಭ್ಯ ಕೊಡಿಸುವ ಮೂಲಕ ಪ್ರಗತಿಗೆ ಸಹಕರಿಸಬೇಕೆಂದು ಸಲಹೆ ನೀಡಿದರು.

ಚಲನಚಿತ್ರ ನಟ ದೊಡ್ಡಣ್ಣ ಅವರು ಮಾತನಾಡಿ, ನಾವು ನಮಗೋಸ್ಕರ ಬದುಕಬೇಕು ಹೊರತು ಇನ್ನೊಬ್ಬರಿಗಾಗಿ ಅಲ್ಲ. ನಾವೆಲ್ಲರೂ ಒಂದು ಎಂಬ ಭಾವನೆ ಬರುವ ವರೆಗೆ ಸಮಾಜ ಉದ್ಧಾರವಾಗುವುದಿಲ್ಲ. ಬಸವಣ್ಣ ಅವರು ಯಾವತ್ತಿಗೂ ಜಾತಿಯತೆ ಮಾಡಿಲ್ಲ. ಆದ್ದರಿಂದ ಜಾತಿ, ಧರ್ಮದ ಹೆಸರಿನಲ್ಲಿ ತಾರತಮ್ಯ ಮಾಡದೆ ಎಲ್ಲರೂ ಒಂದೇ ಎಂಬ ಭಾವನೆಯಲ್ಲಿ ಬಾಳಬೇಕು.

ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. » ನಾಲ್ಕನೇ ಪುಟದಲ್ಲಿ

## ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ | ಚ.ರಾ.ಪಟ್ಟಣದಲ್ಲಿ ಕಾಂಗ್ರೆಸ್ ಭವನಕ್ಕೆ ಭೂಮಿಪೂಜೆ

# ಗ್ಯಾರಂಟಿಗಳಿಂದ 1.20 ಲಕ್ಷ ಕೋಟಿ ರೂ. ಜನರ ಕೈಗೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗ್ಯಾರಂಟಿ ಯೋಜನೆಗಳ ಮೂಲಕ ಎರಡೂವರೆ ವರ್ಷದಲ್ಲಿ 1,20,000 ಕೋಟಿ ರೂ.ಗಳನ್ನು ಜನರಿಗೆ ತಲುಪಿಸಿರುವುದು ಕರ್ನಾಟಕ ಕಾಂಗ್ರೆಸ್. ವಿಶ್ವದ ಯಾವ ರಾಷ್ಟ್ರಗಳು ಈ ಸಾಧನೆ ಮಾಡಿಲ್ಲವೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಹೇಳಿದರು.

ಪಟ್ಟಣದ ಗದ್ದೆರಾಮೇಶ್ವರ ಬಡಾವಣೆಯಲ್ಲಿ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ನೂತನ ತಾಲ್ಲೂಕು ಕಾಂಗ್ರೆಸ್ ಭವನ ಕಾಮಗಾರಿಗೆ ಶನಿವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ನಮ್ಮ ಸರ್ಕಾರ ಬಡವರು, ರೈತರ ಪರವಾಗಿ ಕೆಲಸ ಮಾಡುತ್ತಿದೆ. ಒಂದು ಲಕ್ಷದ ಇಪ್ಪತ್ತು ಸಾವಿರ ಕೋಟಿ ರೂ. ಹಣ ಜನರ ಕೈಗೆ ನೇರವಾಗಿ ಕೊಟ್ಟಿದ್ದೇವೆ. ಇದನ್ನು ಯಾವ ಸರ್ಕಾರವೂ ಪ್ರಪಂಚದಲ್ಲಿ ಮಾಡಿಲ್ಲ. ಕರ್ನಾಟಕದಲ್ಲಿ ಮಾತ್ರ ಸಾಧ್ಯವಾಗಿದೆ. ಕೆಲವರು ಘೋಷಣೆ ಮಾಡಿದ್ದಾರೆ ಆದರೆ ಸಾಧನೆ ಸಾಧ್ಯವಾಗಿಲ್ಲ. ಮಧ್ಯವರ್ತಿಗಳ ಹಾವಳಿ ಇಲ್ಲದೆ, ಕಚೇರಿಗಳಿಗೆ ಫಲಾನುಭವಿಗಳು ಅಲೆದಾಡದೆ



ಜನರು ಕುಳಿತಲ್ಲಿಗೆ ಯೋಜನೆಗಳು ತಲುಪುತ್ತಿವೆ. ಕಾಂಗ್ರೆಸ್ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದೆ ಎಂದರು.


ಐದು ಗ್ಯಾರಂಟಿ ಯೋಜನೆಗಳು ನಾಲ್ಕೂವರೆ ಕೋಟಿ ಕನ್ನಡಿಗರಿಗೆ ಪ್ರತಿದಿನ, ಪ್ರತಿ ತಿಂಗಳು ಸಹಾಯವಾಗುತ್ತಿದೆ. ಒಂದು ಕುಟುಂಬಕ್ಕೆ ತಿಂಗಳಿಗೆ ಐದು, ಆರು, ಏಳು ಸಾವಿರ ರೂ. ಸಿಗುತ್ತಿದೆ. ಇಂತಹ ಯೋಜನೆ ಯಾರು ಮಾಡಿಲ್ಲ. ಯಾವ ಜಾತಿ, ಪಕ್ಷ ನೋಡದೆ ಎಲ್ಲರಿಗೂ ಸಮಾನವಾಗಿ ಮಾಡಿಕೊಟ್ಟಿದ್ದೇವೆ. ಎಲ್ಲರೂ ನಮ್ಮವರೇ, ಎಲ್ಲಾ ಒಂದೇ ಕುಟುಂಬಕ್ಕೆ ಸೇರಿದ ವರು. ಜಾತಿ, ಧರ್ಮ ನೋಡಿ ಗ್ಯಾರಂಟಿ ಕೊಡುತ್ತಿಲ್ಲ. ಎಲ್ಲರನ್ನೂ ಸಮಾನವಾಗಿ ತೆಗೆದುಕೊಂಡು ಹೋಗುತ್ತಿದ್ದೇವೆಂದರು.

ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಪಕ್ಷ ಸಂಘಟನೆಗೆ ಶ್ರಮಿಸುತ್ತಿದ್ದಾರೆ. ಮುಂಬರುವ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿ, ಪುರಸಭೆ ಹಾಗು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಕಾರ್ಯಕರ್ತರು, ಮುಖಂಡರು, ರಾಜ್ಯ ಕಾಂಗ್ರೆಸ್ ಸರ್ಕಾರದ 5 ಗ್ಯಾರಂಟಿ ಯೋಜನೆಗಳಿಂದ ಪ್ರತಿ ಕುಟುಂಬಕ್ಕೂ ಸಿಗುತ್ತಿರುವ ಸೌಲಭ್ಯಗಳ ಕುರಿತು ಮತದಾರರಿಗೆ ಮನವರಿಕೆ ಮಾಡಿಕೊಡುವ ಮೂಲಕ ಪಕ್ಷ ಸಂಘಟನೆಗೆ ಮುಂದಾ ಗುವಂತೆ ಸಲಹೆ ನೀಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಕಾಂಗ್ರೆಸ್ ಭವನ ನಿರ್ಮಾಣ ಮಾಡುವುದು ಕಾರ್ಯಕರ್ತರು ಹಾಗು ಮುಖಂಡರ ದಶಕಗಳ ಕನಸಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾರ್ಗದರ್ಶನ, ಉಪಮುಖ್ಯಮಂತ್ರಿ » ನಾಲ್ಕನೇ ಪುಟದಲ್ಲಿ

**ಇತ್ತೀಚಿನ ಐಎಂಎಫ್ ವರದಿಯ ಪ್ರಕಾರ, ಭಾರತವು ವಿಶ್ವದ ಅತಿ ದೊಡ್ಡ ಆರ್ಥಿಕತೆಗಳ ಪಟ್ಟಿಯಲ್ಲಿ ಮತ್ತೆ 6ನೇ ಸ್ಥಾನಕ್ಕೆ ಕುಸಿದಿದೆ ಎಂಬ ಸುದ್ದಿ ದೇಶದಾದ್ಯಂತ ಚರ್ಚೆಗೆ ಕಾರಣವಾಗಿದೆ. ಕೆಲವೇ ವರ್ಷಗಳ ಹಿಂದೆ ಭಾರತವು ಯುನೈಟೆಡ್ ಕಿಂಗ್‌ಡಮ್ ಮತ್ತು ಜಪಾನ್ ದೇಶಗಳನ್ನು ಹಿಂದಿಕ್ಕಿ 4ನೇ ಸ್ಥಾನಕ್ಕೇರಿದಾಗ, ಭಾರತ ಶೀಘ್ರದ ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಲಿದೆ ಎಂಬ ವಿಶ್ವಾಸ ಹೆಚ್ಚಿತ್ತು.**

# ಬಂಗಾರ ಖರೀದಿಗಿಂತ, ಭಾರತವೇ ಬಂಗಾರವಾಗಲಿ



ಆತ್ಮನಿರ್ಭರ ಎಲ್ಲಾ ಸವಾಲುಗಳ ನಡುವೆಯೂ ಭಾರತವನ್ನು ಸಂಪೂರ್ಣ ನಿರಾಶಾಜನಕ ಆರ್ಥಿಕತೆಯೆಂದು ಹೇಳುವುದು ತಪ್ಪಾಗುತ್ತದೆ. ಭಾರತದ ಆರ್ಥಿಕತೆ ಇನ್ನೂ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಗಳಲ್ಲಿ ಒಂದಾಗಿದೆ. 2022-23ರಲ್ಲಿ ಭಾರತವು 7%ಕ್ಕಿಂತ ಹೆಚ್ಚು ಬೆಳವಣಿಗೆ ಸಾಧಿಸಿತ್ತು. ನಂತರದ ವರ್ಷಗಳಲ್ಲಿ ಸ್ವಲ್ಪ ನಿಧಾನ ಗತಿ ಕಂಡುಬಂದರೂ, ಇದು ಜಾಗತಿಕ ಪರಿಸ್ಥಿತಿಗಳ ಪರಿಣಾಮವೂ ಆಗಿದೆ. ಭಾರತದ ಸೇವಾ ವಲಯ ಇನ್ನೂ ಬಲವಾಗಿಯೇ ಇದೆ. ಐಟಿ ಮತ್ತು ಡಿಜಿಟಲ್ ಆರ್ಥಿಕತೆ ವಿಶ್ವದ ಮಟ್ಟದಲ್ಲಿ ಭಾರತದ ಪ್ರಮುಖ ಶಕ್ತಿಗಳಾಗಿವೆ.

ಇತ್ತೀಚಿನ ಐಎಂಎಫ್ ವರದಿಯ ಪ್ರಕಾರ, ಭಾರತವು ವಿಶ್ವದ ಅತಿ ದೊಡ್ಡ ಆರ್ಥಿಕತೆಗಳ ಪಟ್ಟಿಯಲ್ಲಿ ಮತ್ತೆ 6ನೇ ಸ್ಥಾನಕ್ಕೆ ಕುಸಿದಿದೆ ಎಂಬ ಸುದ್ದಿ ದೇಶದಾದ್ಯಂತ ಚರ್ಚೆಗೆ ಕಾರಣವಾಗಿದೆ. ಕೆಲವೇ ವರ್ಷಗಳ ಹಿಂದೆ ಭಾರತವು ಯುನೈಟೆಡ್ ಕಿಂಗ್ ಡಮ್ ಮತ್ತು ಜಪಾನ್ ದೇಶಗಳನ್ನು ಹಿಂದಿಕ್ಕಿ 4ನೇ ಸ್ಥಾನಕ್ಕೇರಿದಾಗ, ಭಾರತ ಶೀಘ್ರದ ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಲಿದೆ ಎಂಬ ವಿಶ್ವಾಸ ಹೆಚ್ಚಿತ್ತು. ಆದರೆ ಈಗಿನ ಪರಿಸ್ಥಿತಿ ಕೆಲವು ಪ್ರಶ್ನೆಗಳನ್ನು ಎಬ್ಬಿಸುತ್ತಿದೆ: ಭಾರತ ನಿಜವಾಗಿಯೂ ನಿಧಾನಗತಿಗೆ ಸಿಲುಕಿದೆಯೇ? ಅಥವಾ ಇದು ಕೇವಲ ಜಾಗತಿಕ ಆರ್ಥಿಕ ಅಸ್ಥಿರತೆಗಳ ಪರಿಣಾಮವೇ? ಈ ಪ್ರಶ್ನೆಗೆ ಸರಳ ಉತ್ತರ ಇಲ್ಲ.

ಭಾರತ ಕುಸಿಯುತ್ತಿರುವ ಆರ್ಥಿಕತೆಯಲ್ಲ, ಅತಿವೇಗದಲ್ಲಿ ಎಲ್ಲರನ್ನು ಮೀರಿಸುತ್ತಿರುವ ಆರ್ಥಿಕತೆಯೂ ಅಲ್ಲ. ವಾಸ್ತವವಾಗಿ, ಭಾರತವು ದೊಡ್ಡ ಸಾಮರ್ಥ್ಯ ಹೊಂದಿರುವ, ಆದರೆ ಹಲವಾರು ಆಂತರಿಕ ಮತ್ತು ಜಾಗತಿಕ ಒತ್ತಡಗಳನ್ನು ಎದುರಿಸುತ್ತಿರುವ ಪರಿವರ್ತನಾ ಹಂತದ ಆರ್ಥಿಕತೆ.

**ರೂಪಾಯಿಯ ದುರ್ಬಲತೆ**

ಭಾರತದ ಆರ್ಥಿಕ ಗಾತ್ರವನ್ನು ಜಾಗತಿಕ ಮಟ್ಟದಲ್ಲಿ ಅಳೆಯುವಾಗ, ಜಿಡಿಪಿಯನ್ನು ಅಮೆರಿಕನ್ ಡಾಲರ್‌ನಲ್ಲಿ ಲೆಕ್ಕ ಹಾಕಲಾಗುತ್ತದೆ. ಇಲ್ಲಿ ರೂಪಾಯಿ ಮೌಲ್ಯ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ಭಾರತೀಯ ರೂಪಾಯಿ ಡಾಲರ್ ವಿರುದ್ಧ ನಿರಂತರವಾಗಿ ದುರ್ಬಲವಾಗಿದೆ. 2021ರಲ್ಲಿ ಒಂದು ಡಾಲರ್‌ಗೆ ಸುಮಾರು ರೂ.73-75 ಇದ್ದರೆ, 2025ರ ವೇಳೆಗೆ ಅದು ರೂ.82-84 ರವರೆಗೆ ಏರಿಕೆಯಾಗಿದೆ, 2026ರಲ್ಲಿ ರೂ.94-95.

ಕೇವಲ ಒಂದೇ ವರ್ಷದಲ್ಲಿ ರೂಪಾಯಿ ಸುಮಾರು 10%ಕ್ಕಿಂತ ಹೆಚ್ಚು ಮೌಲ್ಯ ಕಳೆದುಕೊಂಡಿದೆ. ಇದು ಕೇವಲ ವಿನಿಮಯ ದರದ ವಿಷಯವಲ್ಲ. ಐಎಂಎಫ್ ಯಾವುದೇ ದೇಶದ ಜಿಡಿಪಿಯನ್ನು ಮೊದಲು ಅದರ ಸ್ಥಳೀಯ ಕರೆನ್ಸಿಯಲ್ಲಿ ಲೆಕ್ಕ ಹಾಕಿ, ನಂತರ ಅದನ್ನು ಡಾಲರ್‌ಗೆ ಪರಿವರ್ತಿಸುತ್ತದೆ.

ಆದ್ದರಿಂದ ರೂಪಾಯಿ ದುರ್ಬಲವಾದರೆ, ಭಾರತದ ನಿಜವಾದ ಉತ್ಪಾದನೆ ಹೆಚ್ಚಿದ್ದರೂ, ಡಾಲರ್‌ನಲ್ಲಿ ಲೆಕ್ಕ ಹಾಕಿದಾಗ ಜಿಡಿಪಿ ಗಾತ್ರ ಕಡಿಮೆಯಾಗಿ ಕಾಣುತ್ತದೆ. ಇದೇ ಕಾರಣದಿಂದ ಭಾರತವು ಆರ್ಥಿಕ ಉತ್ಪಾದನೆಯಲ್ಲಿ ಬೆಳವಣಿಗೆ ಕಂಡಿದ್ದರೂ, ಜಾಗತಿಕ ಸ್ಥಾನದಲ್ಲಿ ಹಿಂದೆ ಸರಿದಂತೆ ಕಾಣುತ್ತಿದೆ.

ಇಲ್ಲಿ ಮತ್ತೊಂದು ಆತಂಕಕಾರಿ ಸಂಗತಿ ಏನೆಂದರೆ, ರೂಪಾಯಿ ಮಾತ್ರವಲ್ಲ, ಏಷ್ಯಾದ ಹಲವಾರು ಕರೆನ್ಸಿಗಳು ಒತ್ತಡದಲ್ಲಿವೆ. ಆದರೆ ಪ್ರಮುಖ ಏಷ್ಯನ್ ಕರೆನ್ಸಿಗಳ ನಡುವೆ ರೂಪಾಯಿ ಅತ್ಯಂತ ದುರ್ಬಲ ಪ್ರದರ್ಶನ ನೀಡುತ್ತಿರುವುದಾಗಿ ಹಲವಾರು ಆರ್ಥಿಕ ವಿಶ್ಲೇಷಣೆಗಳು ಸೂಚಿಸುತ್ತಿವೆ. ಜಪಾನ್ ಆರ್ಥಿಕತೆ ಕಳೆದ ನಾಲ್ಕು ವರ್ಷಗಳಿಂದ ನಿಧಾನಗತಿಯಲ್ಲಿ ಸಾಗುತ್ತಿದ್ದರೂ, ಅವರ ಯೆನ್ ಕರೆನ್ಸಿಯ ಅಸ್ಥಿರತೆ ಭಾರತಕ್ಕಿಂತ ಕಡಿಮೆ ಮಟ್ಟದಲ್ಲಿರುವುದರಿಂದ, ಜಪಾನ್ ಮತ್ತೆ ಭಾರತಕ್ಕಿಂತ ಮೇಲಿನ ಸ್ಥಾನವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿದೆ.

**ಜಾಗತಿಕ ಯುದ್ಧಗಳು ಮತ್ತು ಆರ್ಥಿಕ ಒತ್ತಡ**

ಭಾರತದ ಆರ್ಥಿಕತೆಗೆ ಸವಾಲು ತಂದ ಮತ್ತೊಂದು ಪ್ರಮುಖ ಕಾರಣ ಜಾಗತಿಕ ಅಸ್ಥಿರತೆ. ವಿಶೇಷವಾಗಿ ರಷ್ಯಾ- ಉಕ್ರೇನ್ ಯುದ್ಧ, ಇರಾನ್ - ಇಸ್ರೇಲ್ ಯುದ್ಧ ಪ್ರಪಂಚದ ಆರ್ಥಿಕ ವ್ಯವಸ್ಥೆಯನ್ನು ದೊಡ್ಡ ಮಟ್ಟದಲ್ಲಿ ಅಲುಗಾಡಿಸಿದೆ. ಇಂಧನದ ಬೆಲೆ ಏರಿಕೆ, ಆಹಾರ ಪದಾರ್ಥಗಳ ಬೆಲೆ ಹೆಚ್ಚಳ, ಮತ್ತು ಪೂರೈಕೆ ಸರಪಳಿ ಅಸ್ತವ್ಯಸ್ತತೆ ಜಾಗತಿಕ ಮಾರುಕಟ್ಟೆಗಳಲ್ಲಿ ಅನಿಶ್ಚಿತತೆಯನ್ನು ಸೃಷ್ಟಿಸಿವೆ.

ಭಾರತ ತನ್ನ ಇಂಧನ ಅವಶ್ಯಕತೆಗಳ ದೊಡ್ಡ ಭಾಗವನ್ನು ಆಮದು ಮಾಡಿಕೊಳ್ಳುತ್ತದೆ. ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿದಾಗ, ಭಾರತದ ಆಮದು ವೆಚ್ಚ ಹೆಚ್ಚುತ್ತದೆ. ಇದರಿಂದ ವ್ಯಾಪಾರ ಕೊರತೆ ಹೆಚ್ಚಾಗಿ, ರೂಪಾಯಿ ಮೇಲೆ ಹೆಚ್ಚುವರಿ ಒತ್ತಡ ಬೀಳುತ್ತದೆ. ರೂಪಾಯಿ ದುರ್ಬಲವಾದಂತೆ ಆಮದು ಇನ್ನಷ್ಟು ದುಬಾರಿಯಾಗುತ್ತದೆ - ಇದು ಒಂದು ದುಷ್ಟಚಕ್ರದಂತೆ ಕಾರ್ಯ ನಿರ್ವಹಿಸುತ್ತದೆ.

ಇದರ ಜೊತೆಗೆ, ಅಮೆರಿಕಾ-ಚೀನಾ ವ್ಯಾಪಾರ ಸಂಘರ್ಷ, ಜಾಗತಿಕ ಟ್ಯಾರಿ- ನೀತಿಗಳು ಮತ್ತು ರಕ್ಷಣಾತ್ಮಕ ಪಾಲಿಸಿಗಳು ಕೂಡ ಜಾಗತಿಕ ವ್ಯಾಪಾರವನ್ನು ನಿಧಾನಗೊಳಿಸಿವೆ. ಭಾರತೀಯ ರಫ್ತು ಕ್ಷೇತ್ರಕ್ಕೂ ಇದರ ಪರಿಣಾಮ ಕಂಡುಬಂದಿದೆ. ವಿಶೇಷವಾಗಿ ಟೆಕ್ಸ್ ಟೈಲ್, ಎಲೆಕ್ಟ್ರಾನಿಕ್ಸ್ ಮತ್ತು ಸಣ್ಣ ಉತ್ಪಾದನಾ ವಲಯಗಳು ಜಾಗತಿಕ ಬೇಡಿಕೆಯ ಕುಸಿತದಿಂದ ಒತ್ತಡ ಅನುಭವಿಸಿವೆ.

**ಜಿಡಿಪಿ ಲೆಕ್ಕಾಚಾರ ಮತ್ತು ಬೇಸ್ ಇಯರ್**

ಭಾರತ 2011-12 ಅನ್ನು ಬೇಸ್ ಇಯರ್ ಆಗಿ ಬಳಸುತ್ತಿತ್ತು. ಆ ಸಮಯದ ಬೆಲೆ ಮಟ್ಟಗಳು ಮತ್ತು ಇಂದಿನ ಮಾರುಕಟ್ಟೆ ಪರಿಸ್ಥಿತಿಗಳ ನಡುವೆ ದೊಡ್ಡ ವ್ಯತ್ಯಾಸವಿದೆ. ಆದ್ದರಿಂದ ಹಳೆಯ ಬೇಸ್ ಇಯರ್ ಬಳಸುವುದರಿಂದ ಕೆಲವೊಮ್ಮೆ ಜಿಡಿಪಿ ಅಂಕಿಅಂಶಗಳು ವಾಸ್ತವಿಕ ಸ್ಥಿತಿಗಿಂತ ಹೆಚ್ಚಾಗಿ ಕಾಣಬಹುದು ಎಂಬ ಟೀಕೆಗಳಿವೆ. ಬೇಸ್ ಇಯರ್ ಅನ್ನು ಕಾಲಕಾಲಕ್ಕೆ ನವೀಕರಿಸುವುದು ಅತ್ಯಗತ್ಯ. ಇಲ್ಲದಿದ್ದರೆ ಆರ್ಥಿಕ ಚಟುವಟಿಕೆಗಳ ನಿಜವಾದ ಚಿತ್ರ ಸ್ಪಷ್ಟವಾಗಿ ತೋರಿಸದೇ ಹೋಗಬಹುದು.

**ಭಾರತ ನಿಜವಾಗಿಯೂ ದುರ್ಬಲವಾಗಿದೆಯೇ?**

ಈ ಸವಾಲುಗಳ ನಡುವೆಯೂ ಭಾರತವನ್ನು ಸಂಪೂರ್ಣ ನಿರಾಶಾಜನಕ ಆರ್ಥಿಕತೆಯೆಂದು ಹೇಳುವುದು ತಪ್ಪಾಗುತ್ತದೆ. ಭಾರತದ ಆರ್ಥಿಕತೆ ಇನ್ನೂ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಗಳಲ್ಲಿ ಒಂದಾಗಿದೆ. 2022-23ರಲ್ಲಿ ಭಾರತವು 7%ಕ್ಕಿಂತ ಹೆಚ್ಚು ಬೆಳವಣಿಗೆ ಸಾಧಿಸಿತ್ತು. ನಂತರದ ವರ್ಷಗಳಲ್ಲಿ ಸ್ವಲ್ಪ ನಿಧಾನಗತಿ ಕಂಡುಬಂದರೂ, ಇದು ಜಾಗತಿಕ ಪರಿಸ್ಥಿತಿಗಳ ಪರಿಣಾಮವೂ ಆಗಿದೆ. ಭಾರತದ ಸೇವಾ ವಲಯ ಇನ್ನೂ ಬಲವಾಗಿಯೇ ಇದೆ.

ಐಟಿ ಮತ್ತು ಡಿಜಿಟಲ್ ಆರ್ಥಿಕತೆ ವಿಶ್ವದ ಮಟ್ಟದಲ್ಲಿ ಭಾರತದ ಪ್ರಮುಖ ಶಕ್ತಿಗಳಾಗಿವೆ. ಸ್ಟಾರ್ಟಪ್, ಯುಪಿಐ ಆಧಾರಿತ ಡಿಜಿಟಲ್ ಪಾವತಿ ವ್ಯವಸ್ಥೆ, ಮತ್ತು ಮೂಲಸೌಕರ್ಯ ಅಭಿವೃದ್ಧಿ ಮುಂದುವರಿಯುತ್ತಿವೆ. ವಿದೇಶಿ ಹೂಡಿಕೆಗಳು (ಎಫ್‌ಡಿಐ) ಕೂಡ ಗಣನೀಯ ಮಟ್ಟದಲ್ಲಿ ಭಾರತಕ್ಕೆ ಬರುತ್ತಿವೆ. ವಿಶೇಷವಾಗಿ ಯುವ ಜನಸಂಖ್ಯೆ ಭಾರತಕ್ಕೆ ದೊಡ್ಡ ಶಕ್ತಿಯಾಗಿದೆ. ಜಗತ್ತಿನ ಅನೇಕ ದೇಶಗಳು ವಯೋವೃದ್ಧ ಜನಸಂಖ್ಯೆ ಸಮಸ್ಯೆ ಎದುರಿಸುತ್ತಿರುವಾಗ, ಭಾರತ ದೊಡ್ಡ ಕೆಲಸಗಾರ ವರ್ಗವನ್ನು ಹೊಂದಿದೆ. ಸರಿಯಾದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ ನಡೆದರೆ, ಇದು ಮುಂದಿನ ಎರಡು ದಶಕಗಳಲ್ಲಿ ಭಾರತದ ಅತ್ಯಂತ ದೊಡ್ಡ ಆರ್ಥಿಕ ಬಲವಾಗಬಹುದು.

**5 ಟ್ರಿಲಿಯನ್ ಡಾಲರ್ ಗುರಿ- ವಾಸ್ತವಿಕವೇ?**

ಭಾರತವು 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಗುರಿಯನ್ನು ಹಲವು ವರ್ಷಗಳಿಂದ ಘೋಷಿಸಿದೆ. ಕೋವಿಡ್ ಮುಂಚೆ ಈ ಗುರಿಯನ್ನು 2025ರೊಳಗೆ ಸಾಧಿಸುವ ಸಾಧ್ಯತೆಯಿತ್ತು. ನಂತರ ಅದನ್ನು 2027ಕ್ಕೆ ಮುಂದೂಡಲಾಯಿತು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಈ ಗುರಿ ಮತ್ತೆ ಮುಂದೂಡಲ್ಪಡುವ ಸಾಧ್ಯತೆಗಳ ಬಗ್ಗೆ ಚರ್ಚೆಗಳು ಆರಂಭವಾಗಿವೆ.

2027ರೊಳಗೆ 5 ಟ್ರಿಲಿಯನ್ ಡಾಲರ್ ಗುರಿ ತಲುಪಲು ಭಾರತವು ಪ್ರತಿ ವರ್ಷ ಸುಮಾರು 20% ನಾಮಮಾತ್ರ ಜಿಡಿಪಿ ಬೆಳವಣಿಗೆ ಸಾಧಿಸಬೇಕಾಗಿದೆ. ಆದರೆ ಕಳೆದ ಹತ್ತು ವರ್ಷಗಳ ಸರಾಸರಿ ಬೆಳವಣಿಗೆ ಸುಮಾರು 7% ಮಾತ್ರ. ಪ್ರಪಂಚದ ಯಾವುದೇ ದೊಡ್ಡ ಆರ್ಥಿಕತೆ, ಅಮೆರಿಕಾ ಅಥವಾ ಚೀನಾ ಸೇರಿ ದೀರ್ಘಕಾಲಿಕವಾಗಿ 20% ನಾಮಮಾತ್ರ ಬೆಳವಣಿಗೆಯನ್ನು ಸಾಧಿಸಿರುವ ಉದಾಹರಣೆಗಳು ಬಹಳ ಕಡಿಮೆ. ಇಲ್ಲಿ ಮತ್ತೆ ಕರೆನ್ಸಿ ಮೌಲ್ಯ ಪ್ರಮುಖ ಪಾತ್ರ ವಹಿಸುತ್ತದೆ. ರೂಪಾಯಿ ಡಾಲರ್ ವಿರುದ್ಧ ದುರ್ಬಲವಾಗುತ್ತಾ ಹೋದರೆ, ದೇಶೀಯ ಉತ್ಪಾದನೆ ಹೆಚ್ಚಾದರೂ, ಡಾಲರ್‌ನಲ್ಲಿ ಜಿಡಿಪಿಗಾತ್ರ ಕಡಿಮೆಯಾಗಬಹುದು. ಆದ್ದರಿಂದ ಕೇವಲ ಆರ್ಥಿಕ ಉತ್ಪಾದನೆ ಹೆಚ್ಚಿಸುವುದಷ್ಟೇ ಸಾಕಾಗುವುದಿಲ್ಲ; ಕರೆನ್ಸಿಯ ಸ್ಥಿರತೆಯೂ ಅಷ್ಟೇ ಮುಖ್ಯ.

**ನಿಜವಾದ ಚಿತ್ರ**

ಭಾರತ ಅತಿದೊಡ್ಡ ಸಂಕಷ್ಟದಲ್ಲಿಯೂ ಇಲ್ಲ; ಸಂಪೂರ್ಣ ಸುರಕ್ಷಿತ ಸ್ಥಿತಿಯಲ್ಲೂ ಇಲ್ಲ. ಇದು ವೇಗವಾಗಿ ಬೆಳೆಯಲು ಸಾಮರ್ಥ್ಯವಿರುವ, ಆದರೆ ಜಾಗತಿಕ ಮತ್ತು ಆಂತರಿಕ ಒತ್ತಡಗಳನ್ನು ಎದುರಿಸುತ್ತಿರುವ ಆರ್ಥಿಕತೆ. ಐಎಂಎ- ರ್ಯಾಂಕಿಂಗ್ ಗಳು ಮತ್ತು ಜಿಡಿಪಿ ಸಂಖ್ಯೆಗಳು ಒಂದು ದಿಕ್ಕನ್ನು ತೋರಿಸುತ್ತವೆ; ಆದರೆ ಆರ್ಥಿಕತೆಯ ನಿಜವಾದ ಶಕ್ತಿ ಅದರ ಜನರಲ್ಲಿ, ಅವರ ಪರಿಶ್ರಮದಲ್ಲಿ ಮತ್ತು ದೀರ್ಘಕಾಲೀನ ದೃಷ್ಟಿಕೋನದಲ್ಲಿ ಅಡಗಿದೆ. ಭಾರತದ ಭವಿಷ್ಯ ಇನ್ನೂ ಪ್ರಕಾಶಮಾನವಾಗಿರಬಹುದು - ಆದರೆ ಅದಕ್ಕಾಗಿ ಭಾವನೆಗಳಿಗಿಂತ ವಾಸ್ತವಿಕತೆ, ರಾಜಕೀಯ ಘೋಷಣೆಗಳಿಗಿಂತ ದೀರ್ಘಕಾಲೀನ ನೀತಿಗಳು, ಮತ್ತು ಸಂಖ್ಯೆಗಳಿಗಿಂತ ಜನಕೇಂದ್ರಿತ ಬೆಳವಣಿಗೆ ಮುಖ್ಯ.

ಪ್ರಧಾನ ಮಂತ್ರಿ ನರೇಂದ್ರ ಮೋದಿ, ಭಾರತೀಯರು ಚಿನ್ನದ ಮೇಲಿನ ಹೂಡಿಕೆಯನ್ನು ಕಡಿಮೆ ಮಾಡಬೇಕು ಹಾಗೂ ಪೆಟ್ರೋಲ್ ಮತ್ತು ಡೀಸೆಲ್ ಬಳಕೆಯನ್ನು ಮಿತಿಗೊಳಿಸಬೇಕು ಎಂದು ಸಲಹೆ ನೀಡಿದ್ದಾರೆ. ಈ ಸಲಹೆಯ ಹಿಂದೆ ದೇಶದ ಆರ್ಥಿಕ ಸ್ಥಿರತೆ ಮತ್ತು ಜಿಡಿಪಿ ವೃದ್ಧಿಗೆ ಸಂಬಂಧಿಸಿದ ಮಹತ್ವದ ಉದ್ದೇಶ ಅಡಗಿದೆ. ಭಾರತವು ಪ್ರಪಂಚದಲ್ಲಿ ಅತಿ ಹೆಚ್ಚು ಚಿನ್ನವನ್ನು ಆಮದು ಮಾಡುವ ದೇಶಗಳಲ್ಲಿ ಒಂದಾಗಿದೆ.

ಭಾರತೀಯರು ಚಿನ್ನವನ್ನು ಸುರಕ್ಷಿತ ಹೂಡಿಕೆ ಎಂದು ಪರಿಗಣಿಸಿ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುತ್ತಾರೆ. ಆದರೆ ಚಿನ್ನದ ಆಮದು ಹೆಚ್ಚಾದಂತೆ ದೇಶದ ವಿದೇಶಿ ವಿನಿಮಯ ಸಂಗ್ರಹದ ಮೇಲೆ ಒತ್ತಡ ಹೆಚ್ಚುತ್ತದೆ. ಇದರಿಂದ ವ್ಯಾಪಾರ ಹಿನ್ನಡೆ (ಥಿ ಈಟ್ಬಿಜ್ಜಿಜಿರಿ) ಉಂಟಾಗಿ ರೂಪಾಯಿ ಮೌಲ್ಯ ಕುಸಿಯುವ ಸಾಧ್ಯತೆ ಹೆಚ್ಚುತ್ತದೆ. ಚಿನ್ನದಲ್ಲಿ ಹೂಡಿಕೆ ಮಾಡುವ ಬದಲು ಉತ್ಪಾದನಾ, ಕೈಗಾರಿಕಾ ಹಾಗೂ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿದರೆ ಉದ್ಯೋಗ ಸೃಷ್ಟಿಯಾಗುತ್ತದೆ ಮತ್ತು ದೇಶದ ಜಿಡಿಪಿ ಹೆಚ್ಚಾಗುತ್ತದೆ.

ಇನ್ನೊಂದೆಡೆ ಭಾರತ ತನ್ನ ಪೆಟ್ರೋಲ್ ಮತ್ತು ಡೀಸೆಲ್ ಅವಶ್ಯಕತೆಗಾಗಿ ಬಹುತೇಕ ಕಚ್ಚಾ ತೈಲವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಹೆಚ್ಚಾದಂತೆ ತೈಲ ಆಮದು ವೆಚ್ಚವೂ ಹೆಚ್ಚುತ್ತದೆ. ಇದರಿಂದ ದೇಶದ ಆರ್ಥಿಕ ಸಮತೋಲನಕ್ಕೆ ಹೊಡೆತ ಬೀಳುತ್ತದೆ.

## ಸಮತೋಲನದ ನೀತಿಗಳು ಅಗತ್ಯ

**ಭಾರತದ ಮುಂದಿನ ಆರ್ಥಿಕ ಪಯಣಕ್ಕಾಗಿ ಕೆಲವು ಪ್ರಮುಖ ಅಂಶಗಳ ಮೇಲೆ ಒತ್ತು ನೀಡಬೇಕು:**

- **1. ರೂಪಾಯಿ ಸ್ಥಿರತೆ - ಹಣದುಬ್ಬರ ನಿಯಂತ್ರಣ ಮತ್ತು ಬಲವಾದ ಹಣಕಾಸು ನೀತಿಗಳ ಮೂಲಕ ರೂಪಾಯಿ ಮೌಲ್ಯವನ್ನು ಸ್ಥಿರಗೊಳಿಸಬೇಕು.**
- **2. ರಫ್ತು ಉತ್ತೇಜನ - ತಯಾರಿಕಾ ಕ್ಷೇತ್ರವನ್ನು ಬಲಪಡಿಸಿ ಮೇಕ್ ಇನ್ ಇಂಡಿಯಾವನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಹೆಚ್ಚಿನ ಮೌಲ್ಯದ ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆಗೆ ರಫ್ತು ಮಾಡುವ ಸಾಮರ್ಥ್ಯ ಬೆಳೆಸಬೇಕು.**
- **3. ಉದ್ಯೋಗ ಸೃಷ್ಟಿ - ಯುವಜನತೆಗೆ ದೊಡ್ಡ ಪ್ರಮಾಣದಲ್ಲಿ ಗುಣಮಟ್ಟದ ಉದ್ಯೋಗಗಳನ್ನು ಸೃಷ್ಟಿಸುವುದು ಅತ್ಯಂತ ಅಗತ್ಯ.**
- **4. ಬೇಸ್ ಇಯರ್ ನವೀಕರಣ - ಜಿಡಿಪಿ ಲೆಕ್ಕಾಚಾರವನ್ನು ಆಧುನಿಕ ಆರ್ಥಿಕ ವಾಸ್ತವಿಕತೆಗೆ ಹೊಂದುವಂತೆ ಪರಿಷ್ಕರಿಸಬೇಕು.**
- **5. ಸಮಾನತೆಯ ಬೆಳವಣಿಗೆ - ಆರ್ಥಿಕ ಬೆಳವಣಿಗೆಯ ಲಾಭ ಸಾಮಾನ್ಯ ಜನರಿಗೂ ತಲುಪುವಂತೆ ಮಾಡಬೇಕು. ಕೇವಲ ಅಂಕಿಅಂಶಗಳ ಬೆಳವಣಿಗೆ ಸಾಕಾಗುವುದಿಲ್ಲ.**

ಜನರು ಸಾರ್ವಜನಿಕ ಸಾರಿಗೆ ಬಳಸುವುದು, ವಿದ್ಯುತ್ ವಾಹನಗಳಿಗೆ ಆದ್ಯತೆ ನೀಡುವುದು ಹಾಗೂ ಇಂಧನ ಉಳಿತಾಯ ಕ್ರಮಗಳನ್ನು ಅನುಸರಿಸುವುದರಿಂದ ತೈಲ ಆಮದು ಕಡಿಮೆಯಾಗುತ್ತದೆ. ಇದರ ಪರಿಣಾಮವಾಗಿ ದೇಶದ ವಿದೇಶಿ ವಿನಿಮಯ ಉಳಿಯುತ್ತದೆ ಮತ್ತು ಆ ಹಣವನ್ನು ಅಭಿವೃದ್ಧಿ ಯೋಜನೆಗಳಿಗೆ ಬಳಸಬಹುದು. ಪ್ರಧಾನ ಮಂತ್ರಿಯವರ ಈ ಸಲಹೆ ಕೇವಲ ವೈಯಕ್ತಿಕ ಉಳಿತಾಯದ ಬಗ್ಗೆ ಮಾತ್ರವಲ್ಲ; ಅದು ರಾಷ್ಟ್ರದ ಆರ್ಥಿಕ ಭದ್ರತೆಯ ಕುರಿತಾಗಿದೆ. ಜನರು ತಮ್ಮ ಖರ್ಚು ಮತ್ತು ಹೂಡಿಕೆ ಪದ್ಧತಿಯಲ್ಲಿ ಬದಲಾವಣೆ ತಂದರೆ ದೇಶದ ಆರ್ಥಿಕತೆ ಹೆಚ್ಚು ಬಲವಾಗುತ್ತದೆ.

ಚಿನ್ನ ಮತ್ತು ಇಂಧನ ಆಮದು ಕಡಿಮೆಯಾದರೆ ಸರ್ಕಾರದ ಹಣಕಾಸಿನ ಒತ್ತಡ ಇಳಿಯುತ್ತದೆ ಹಾಗೂ ದೇಶೀಯ ಉತ್ಪಾದನೆಗೆ ಉತ್ತೇಜನ ಸಿಗುತ್ತದೆ. ಭಾರತೀಯರು ಚಿನ್ನದ ಮೇಲಿನ ಅತಿಯಾದ ಆಸಕ್ತಿಯನ್ನು ಕಡಿಮೆ ಮಾಡಿ, ಉತ್ಪಾದಕ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವುದು ಮತ್ತು ಇಂಧನವನ್ನು ಮಿತವಾಗಿ ಬಳಸುವುದು ದೇಶದ ಜಿಡಿಪಿ ವೃದ್ಧಿಗೆ ಸಹಕಾರಿಯಾಗುತ್ತದೆ. ಇದು ಆತ್ಮನಿರ್ಭರ ಭಾರತ ನಿರ್ಮಾಣದತ್ತ ಮಹತ್ವದ ಹೆಜ್ಜೆಯಾಗಲಿದೆ.

**- ಲೀನಾ ಜೋಶಿ**



# ಹತಾಶೆಯ ಸ್ಕ್ರೀನ್‌ನಿಂದ ಹಸನಾದ ಬದುಕಿನತ್ತ..!

**» ಮೊಬೈಲ್ ಪರದೆಯ ನೀಲಿ ಬೆಳಕು ನಿದ್ರೆಯ ಚಕ್ರವನ್ನು ಅಸ್ತವ್ಯಸ್ತಗೊಳಿಸಿ ನಿದ್ರಾಹೀನತೆಗೆ ಕಾರಣವಾಗುತ್ತದೆ. ದೀರ್ಘಕಾಲ ಒಂದೇ ಭಂಗಿಯಲ್ಲಿ ಕುಳಿತು ಸ್ಕ್ರೋಲ್ ಮಾಡುವುದರಿಂದ ಕಣ್ಣಿನ ತೊಂದರೆ, ತಲೆನೋವು ಮತ್ತು ಕುತ್ತಿಗೆ ನೋವು ಕಾಣಿಸಿಕೊಳ್ಳಬಹುದು. ಇದು ಕೆಲಸದ ಉತ್ಪಾದಕತೆಯನ್ನು ಕುಂಠಿತಗೊಳಿಸುವುದಲ್ಲದೆ, ಕುಟುಂಬ ಸದಸ್ಯರ ನಡುವಿನ ಭಾವನಾತ್ಮಕ ಸಂಬಂಧಗಳನ್ನು ದೂರ ಮಾಡುತ್ತಿದೆ.**

ಇಂದಿನ ಡಿಜಿಟಲ್ ಯುಗದಲ್ಲಿ ಮೊಬೈಲ್ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ. ಬೆಳಗ್ಗೆ ಕಣ್ಣು ತೆರೆದ ಕ್ಷಣದಿಂದ ರಾತ್ರಿ ಮಲಗುವವರೆಗೂ ನಮ್ಮ ಬೆರಳುಗಳು ಮೊಬೈಲ್ ಪರದೆಯ ಮೇಲೆ ನಿರಂತರವಾಗಿ ಓಡಾಡುತ್ತಲೇ ಇರುತ್ತವೆ. ಅರೆಬರೆ ನಿದ್ರೆಯಲ್ಲಿದ್ದರೂ ಸಾಮಾಜಿಕ ಜಾಲತಾಣಗಳ ಪುಟಗಳನ್ನು ಮೇಲಕ್ಕೆ ಕೆಳಕ್ಕೆ ತಳ್ಳುತ್ತಲೇ ಇರುತ್ತವೆ.

ನಕಾರಾತ್ಮಕ ಸುದ್ದಿಗಳು, ಆತಂಕ ಹುಟ್ಟಿಸುವ ಪೋಸ್ಟ್‌ಗಳು ಮತ್ತು ದುಃಖಭರಿತ ಘಟನೆಗಳು ಮನಸ್ಸಿನಲ್ಲಿ ಒತ್ತಡ ಉಂಟು ಮಾಡಿದರೂ, ನಾವು ಮಾತ್ರ ನಿಲ್ಲಿಸದೆ ಮತ್ತಷ್ಟು ಸ್ಕ್ರೋಲ್ ಮಾಡುತ್ತಾ ಹೋಗುತ್ತೇವೆ. ಈ ಅಪಾಯಕಾರಿ ಅಭ್ಯಾಸವನ್ನೇ ಮನಃಶಾಸ್ತ್ರಜ್ಞರು ಡೂಮ್ ಸ್ಕ್ರೋಲಿಂಗ್ ಎನ್ನುತ್ತಾರೆ. ಈ ಪ್ರವೃತ್ತಿ ಕೇವಲ ಸಮಯದ ಪೋಲಾಗುವುದಲ್ಲ, ಬದಲಾಗಿ ನಮ್ಮ ಮನಃಶಾಂತಿ ಮತ್ತು ಸಂಬಂಧಗಳ ಮೇಲೆ ದುಷ್ಪರಿಣಾಮ ಬೀರುವ ಒಂದು ಅಗೋಚರ ವೈರಸ್.

**ವ್ಯಸನದ ವೇಷಗಳು:** ಬೆಳಗ್ಗೆ ಎದ್ದೊಡನೆಯೇ ಮೊಬೈಲ್ ಹುಡುಕುವುದು, ಅತಿಯಾದ ಸ್ಕ್ರೋಲಿಂಗ್ ನಂತರ ಆಯಾಸ, ಕೋಪ ಅಥವಾ ಶೂನ್ಯತೆ ಅನುಭವಿಸುವುದು ಮತ್ತು ಸ್ಕ್ರೋಲ್ ನಿಲ್ಲಿಸಲಾಗದ ಅನಿವಾರ್ಯತೆಗೆ ಸಿಲುಕುವುದು. ಸ್ಕ್ರೀನ್ ಮುಂದೆ ಗಂಟೆಗಟ್ಟಲೆ ಸಮಯ ಕಳೆದರೂ ನೆನಪಿನಲ್ಲಿ ಏನೂ ಧನಾತ್ಮಕ ಸಂಗತಿಗಳಿಲ್ಲದಿರುವುದು. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಜನರೊಂದಿಗೆ ಮಾತನಾಡುವಾಗ ಕಿರಿಕಿರಿ ಉಂಟಾಗುವುದು, ಡೂಮ್ ಸ್ಕ್ರೋಲಿಂಗ್‌ನ ಪ್ರಮುಖ ಲಕ್ಷಣಗಳಾಗಿವೆ.

**ಬೆಳಕಿನ ಪರದೆಯ ಕತ್ತಲೆ ಪರಿಣಾಮ:** ನಮ್ಮ ಕೈಯಲ್ಲಿರುವ ಸ್ಮಾರ್ಟ್‌ಫೋನ್ ಕೇವಲ ಸಂವಹನ ಸಾಧನವಾಗಿ ಉಳಿದಿಲ್ಲ. ಸಂಶೋಧನೆಗಳ ಪ್ರಕಾರ, ದಿನಕ್ಕೆ 30 ನಿಮಿಷಕ್ಕಿಂತ ಹೆಚ್ಚು ಕಾಲ ನಕಾರಾತ್ಮಕ ವಿಷಯಗಳನ್ನು ವೀಕ್ಷಿಸುವುದರಿಂದ ವ್ಯಕ್ತಿಯ ಆತ್ಮವಿಶ್ವಾಸ ಕುಸಿಯುತ್ತದೆ. ಇದು ಯುವಜನತೆಯಲ್ಲಿ ಆತಂಕ, ಖಿನ್ನತೆ ಮತ್ತು ಏಕಾಗ್ರತೆಯ ಕೊರತೆಯನ್ನು ಹೆಚ್ಚಿಸುವುದಲ್ಲದೆ, ಮಿದುಳಿನ ರಸಾಯನಶಾಸ್ತ್ರವನ್ನೇ ಏರುಪೇರು ಮಾಡುತ್ತದೆ.

ಪರದೆಯ ಮೇಲೆ ಮಿನುಗುವ ಇತರರ ಆಕರ್ಷಕ ಜೀವನಶೈಲಿಯನ್ನು ಕಂಡು, ನಮ್ಮ ನೈಜ ಬದುಕನ್ನು ಅವರ ಫಿಲ್ಟರ್ ಮಾಡಿದ ಬದುಕಿನೊಂದಿಗೆ ಹೋಲಿಸಿಕೊಳ್ಳುವುದು ನಾಡಿಗೆ ನಮ್ಮನ್ನು ಹತಾಶೆಯ ಕೂಪಕ್ಕೆ ದೂಡುತ್ತದೆ. ದೈಹಿಕವಾಗಿಯೂ ಈ ಅಭ್ಯಾಸ ತೀವ್ರ ತೊಂದರೆಗಳನ್ನು ತಂದೊಡ್ಡುತ್ತದೆ.

ಮೊಬೈಲ್ ಪರದೆಯ ನೀಲಿ ಬೆಳಕು ನಿದ್ರೆಯ ಚಕ್ರವನ್ನು ಅಸ್ತವ್ಯಸ್ತಗೊಳಿಸಿ ನಿದ್ರಾಹೀನತೆಗೆ ಕಾರಣವಾಗುತ್ತದೆ. ದೀರ್ಘಕಾಲ ಒಂದೇ ಭಂಗಿಯಲ್ಲಿ ಕುಳಿತು ಸ್ಕ್ರೋಲ್ ಮಾಡುವುದರಿಂದ ಕಣ್ಣಿನ ತೊಂದರೆ, ತಲೆನೋವು ಮತ್ತು ಕುತ್ತಿಗೆ ನೋವು ಕಾಣಿಸಿಕೊಳ್ಳಬಹುದು. ಇದು ಕೆಲಸದ ಉತ್ಪಾದಕತೆಯನ್ನು ಕುಂಠಿತಗೊಳಿಸುವುದಲ್ಲದೆ, ಕುಟುಂಬ ಸದಸ್ಯರ ನಡುವಿನ ಭಾವನಾತ್ಮಕ ಸಂಬಂಧಗಳನ್ನು ದೂರ ಮಾಡುತ್ತಿದೆ.

**ಅಲ್ಗಾರಿದಮ್ ಸುಳಿ:** ಜಗತ್ತಿನಲ್ಲಿ ನಡೆಯುತ್ತಿರುವ ಕೆಟ್ಟ ಘಟನೆಗಳ ಬಗ್ಗೆ ತಿಳಿದುಕೊಂಡಿದ್ದರೆ ನಾವು ಸುರಕ್ಷಿತವಾಗಿರಬಹುದು ಎಂಬ ಭ್ರಮೆ ನಮ್ಮ ಮಿದುಳಿನಲ್ಲಿರುತ್ತದೆ. ಇಂತಹ ಮಾಹಿತಿಯ ಹಸಿವಿನಿಂದಾಗಿ ನಾವು ಅರಿಯದೆಯೇ ನಕಾರಾತ್ಮಕ ವಿಷಯಗಳತ್ತ ಆಕರ್ಷಿತರಾಗುತ್ತೇವೆ. ಇದಕ್ಕೆ ಪೂರಕವಾಗಿ, ಸೋಶಿಯಲ್ ಮೀಡಿಯಾ ಅಲ್ಗಾರಿದಮ್‌ಗಳು ಬಳಕೆದಾರರನ್ನು ಹೆಚ್ಚು ಕಾಲ ಹಿಡಿದಿಟ್ಟುಕೊಳ್ಳುವ ಉದ್ದೇಶದಿಂದ ಅಂತಹ ಆತಂಕಕಾರಿ ವಿಷಯಗಳನ್ನೇ ಪದೇ ಪದೇ ನಮ್ಮ ಮುಂದೆ ತರುತ್ತವೆ. ಈ ಸುಳಿಗೆ ಸಿಲುಕಿದಾಗ ಜನರು ಕ್ರಮೇಣ ಪರಿಸ್ಥಿತಿಯ ಮೇಲಿನ ನಿಯಂತ್ರಣ ಕಳೆದುಕೊಳ್ಳುತ್ತಾರೆ.


**ಪರದೆಗೆ ಮಿತಿ, ಮನಸ್ಸಿಗೆ ನೆಮ್ಮದಿ:** ಡೂಮ್ ಸ್ಕ್ರೋಲಿಂಗ್ ತಡೆಗಟ್ಟಲು ಡಿಜಿಟಲ್ ಗಡಿಗಳನ್ನು ನಿಗದಿಪಡಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯ. ಸ್ಮಾರ್ಟ್‌ಫೋನ್‌ಗಳಲ್ಲಿರುವ ಡಿಜಿಟಲ್ ವೆಲ್‌ಬೀಯಿಂಗ್ ಅಥವಾ ಸ್ಕ್ರೀನ್ ಟೈಮ್ ಫೀಚರ್ ಬಳಸಿ ಸಮಯದ ಮಿತಿ ನಿಗದಿ ಪಡಿಸಿಕೊಳ್ಳಬೇಕು.

ಫೋನಿನ ನೋಟಿಫಿಕೇಶನ್‌ಗಳನ್ನು ಆಫ್ ಮಾಡುವುದು ಮತ್ತು ಪರದೆಯನ್ನು ಗ್ರೇ-ಸ್ಕೇಲ್ (ಕಪ್ಪು-ಬಿಳುಪು) ಮೋಡ್‌ಗೆ ಬದಲಾಯಿಸುವುದು ಮೊಬೈಲ್ ಬಳಸುವ ಆಕರ್ಷಣೆಯನ್ನು ಕಡಿಮೆ ಮಾಡುತ್ತದೆ. ನಮ್ಮ ಮನಸ್ಥಿತಿಯು ನಾವು ನೋಡುವ ವಿಷಯಗಳ ಮೇಲೆ ಅವಲಂಬಿತವಾಗಿರುವುದರಿಂದ, ಆತಂಕ ಹುಟ್ಟಿಸುವ ಅಕೌಂಟ್‌ಗಳನ್ನು ಅನಾಲೋ ಮಾಡಿ, ಪ್ರಕೃತಿ, ಕಲೆ, ವಿಜ್ಞಾನ ಮತ್ತು ಸಾಹಿತ್ಯದಂತಹ ಪಾಸಿಟಿವ್ ಫೀಡ್‌ಗಳನ್ನು ಬೆಳೆಸಿಕೊಳ್ಳಬೇಕು. ಬೆಳಗ್ಗೆ ಎದ್ದ ತಕ್ಷಣ ಮತ್ತು ರಾತ್ರಿ ಮಲಗುವ ಮುನ್ನ ಕನಿಷ್ಠ ಒಂದು ಗಂಟೆ ನೋ-ಫೋನ್ ಟೈಮ್ ಪಾಲಿಸಬೇಕು.

ಊಟದ ಮೇಜು ಅಥವಾ ಮಲಗುವ ಕೋಣೆಯನ್ನು ಫೋನ್ ಮುಕ್ತ ವಲಯವನ್ನಾಗಿ ಮಾಡಿಕೊಳ್ಳುವುದು ಉತ್ತಮ. ವಾರಕ್ಕೊಮ್ಮೆ ಡಿಜಿಟಲ್ ಡಿಟಾಕ್ಸ್ ಅಂದರೆ ಸಂಪೂರ್ಣವಾಗಿ ಡಿಜಿಟಲ್ ಸಾಧನಗಳಿಂದ ದೂರವಿರುವ ಹವ್ಯಾಸ ರೂಢಿಸಿಕೊಳ್ಳಿ. ಆ ಸಮಯದಲ್ಲಿ ಓದು, ಸಂಗೀತ, ನಡಿಗೆ ಅಥವಾ ಪ್ರೀತಿಪಾತ್ರರೊಂದಿಗೆ ಮುಖಾಮುಖಿ ಸಂಭಾಷಣೆ ಮಾಡುವುದರಿಂದ ಮನಸ್ಸು ತಾಜಾವಾಗುತ್ತದೆ. ನೆನಪಿಡಿ, ಮನಸ್ಸಿಗೆ ನಿಜವಾದ ವಿಶ್ರಾಂತಿ ಸಿಗುವುದು ಡಿಜಿಟಲ್ ಪರದೆಯಲ್ಲಲ್ಲ, ಬದಲಾಗಿ ನೈಜ ಬದುಕಿನ ಕ್ಷಣಗಳಲ್ಲಿ.

ತಂತ್ರಜ್ಞಾನದ ಬಳಕೆಯು ಅರಿವಿನಿಂದ ಕೂಡಿದೆಯೋ ಅಥವಾ ವ್ಯಸನವಾಗಿದೆಯೋ ಎಂಬ ಆತ್ಮಾವಲೋಕನ ಮಾಡಿಕೊಂಡು, ಅನಗತ್ಯ ಡೂಮ್ ಸ್ಕ್ರೋಲಿಂಗ್‌ಗೆ ಗುಡ್ ಬೈ ಹೇಳಿ; ಧನಾತ್ಮಕತೆಯತ್ತ ಹೆಜ್ಜೆ ಇರಿಸಿ.

**- ಹೊಸ್ಮನೆ** ಮುತ್ತು




# ಕಳಲೆ: ಭವಿಷ್ಯದ ಸೂಪರ್ ಫುಡ್ ಆಗಬಹುದೇ?

**ಇತ್ತೀಚಿನ ಸಂಶೋಧನೆಗಳು ಕಳಲೆಗಳಲ್ಲಿ ಇರುವ ಪೌಷ್ಟಿಕಾಂಶಗಳ ಬಗ್ಗೆ ಹೊಸ ಬೆಳಕು ಚೆಲ್ಲಿವೆ. ಕಡಿಮೆ ಕ್ಯಾಲೊರಿ, ಹೆಚ್ಚು ನಾರಿನಾಂಶ, ಆಂಟಿಆಕ್ಸಿಡೆಂಟ್‌ಗಳು ಮತ್ತು ಹಲವು ಖನಿಜಾಂಶಗಳನ್ನು ಹೊಂದಿರುವ ಕಳಲೆಗಳು ದೇಹದ ಜೀರ್ಣಕ್ರಿಯೆಯನ್ನು ಸುಧಾರಿಸಲು ಸಹಾಯ ಮಾಡಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.**

ನಮ್ಮ ಗ್ರಾಮೀಣ ಅಡುಗೆಮನೆಗಳಲ್ಲಿ ಸಾಮಾನ್ಯ ಆಹಾರವಾಗಿದ್ದ ಬಿದಿರು ಮೊಗ್ಗು (ಕಳಲೆ)ಗಳು ಇಂದು ಜಾಗತಿಕ ವಿಜ್ಞಾನಿಗಳ ಗಮನ ಸೆಳೆಯುತ್ತಿವೆ. ಹೊಟ್ಟೆಯ ಆರೋಗ್ಯ, ದೇಹದ ಚಯಾಪಚಯ ಕ್ರಿಯೆ ಮತ್ತು ರಕ್ತದಲ್ಲಿನ ಸಕ್ಕರೆ ನಿಯಂತ್ರಣಕ್ಕೆ ಕಳಲೆ ಸಹಾಯಕವಾಗಬಹುದು ಎಂಬ ಅಧ್ಯಯನಗಳು ಚರ್ಚೆಗೆ ಕಾರಣವಾಗಿವೆ.

ಪರಂಪರೆಯಿಂದ ಬಂದಿದ್ದ ಈ ಆಹಾರ ಇದೀಗ ಸೂಪರ್ ಫುಡ್ ಎಂಬ ಹೊಸ ಗುರುತಿನತ್ತ ಹೆಜ್ಜೆ ಇಡುತ್ತಿದೆ. ಉತ್ತರ ಪೂರ್ವ ಭಾರತದ ಅನೇಕ ಭಾಗಗಳಲ್ಲಿ ಕಳಲೆ ದಿನನಿತ್ಯದ ಆಹಾರದ ಒಂದು ಭಾಗವಾಗಿವೆ. ಅಸ್ಸಾಂ, ನಾಗಾಲ್ಯಾಂಡ್, ಮಣಿಪುರ ಸೇರಿದಂತೆ ಹಲವೆಡೆ ಜನರು ಕಳಲೆಗಳನ್ನು ಬೇಯಿಸಿ, ಉಪ್ಪಿನಕಾಯಿ ಮಾಡಿ, ಫರ್ಮೆಂಟೆಡ್ ರೂಪದಲ್ಲಿ ಸೇವಿಸುತ್ತಾರೆ. ಅಲ್ಲಿ ಇದು ಕೇವಲ ಆಹಾರವಲ್ಲ; ಸಂಸ್ಕೃತಿ ಮತ್ತು ಜೀವನಶೈಲಿಯ ಭಾಗವಾಗಿದೆ.

ಇತ್ತೀಚಿನ ಸಂಶೋಧನೆಗಳು ಕಳಲೆಗಳಲ್ಲಿ ಇರುವ ಪೌಷ್ಟಿಕಾಂಶಗಳ ಬಗ್ಗೆ ಹೊಸ ಬೆಳಕು ಚೆಲ್ಲಿವೆ. ಕಡಿಮೆ ಕ್ಯಾಲೊರಿ, ಹೆಚ್ಚು ನಾರಿನಾಂಶ, ಆಂಟಿಆಕ್ಸಿಡೆಂಟ್‌ಗಳು ಮತ್ತು ಹಲವು ಖನಿಜಾಂಶಗಳನ್ನು ಹೊಂದಿರುವ ಕಳಲೆಗಳು ದೇಹದ ಜೀರ್ಣಕ್ರಿಯೆಯನ್ನು ಸುಧಾರಿಸಲು ಸಹಾಯ ಮಾಡಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.



ಇಂದು ಅನೇಕ ಜನರು ಹೊಟ್ಟೆ ಸಮಸ್ಯೆ, ಅಜೀರ್ಣ, ಆಸಿಡ್ಟಿ ಮತ್ತು ಜೀರ್ಣಾಂಗದ ತೊಂದರೆಗಳಿಂದ ಬಳಲುತ್ತಿದ್ದಾರೆ. ಅತಿಯಾದ ಪ್ರಾಸೆ ಆಹಾರ, ಒತ್ತಡದ ಜೀವನಶೈಲಿ ಮತ್ತು ಅಸಮರ್ಪಕ ಆಹಾರ ಪದ್ಧತಿ ಇದರ ಪ್ರಮುಖ ಕಾರಣಗಳಾಗಿವೆ. ಈ ಹಿನ್ನೆಲೆಯ ಕಳಲೆಗಳು ಹೊಟ್ಟೆಯ ಒಳಗಿನ ಉತ್ತಮ ಬ್ಯಾಕ್ಟೀರಿಯಾಗಳನ್ನು ಬೆಳೆಸುವಲ್ಲಿ ಸಹಾಯಕವಾಗಬಹುದು ಎಂಬ ಅಭಿಪ್ರಾಯಗಳು ಕೇಳಿ ಬರುತ್ತಿವೆ.

ಹೊಟ್ಟೆಯ ಆರೋಗ್ಯ ಉತ್ತಮವಾಗಿದ್ದರೆ ದೇಹದ ಶಕ್ತಿಯ ಮಟ್ಟ, ರೋಗನಿರೋಧಕ ಶಕ್ತಿ ಮತ್ತು ಮಾನಸಿಕ ಆರೋಗ್ಯಕ್ಕೂ ಒಳ್ಳೆಯ ಪರಿಣಾಮ ಉಂಟಾಗುತ್ತದೆ ಎನ್ನುವುದು ವೈದ್ಯಕೀಯ ಕ್ಷೇತ್ರದ ಅಭಿಪ್ರಾಯ.

ಇದಷ್ಟೇ ಅಲ್ಲದೆ, ಕಳಲೆಗಳು ದೇಹದ ತೂಕ ನಿಯಂತ್ರಣಕ್ಕೂ ಸಹಕಾರಿ ಆಗಬಹುದು ಎಂದು ಸಂಶೋಧಕರು ಹೇಳಿದ್ದಾರೆ. ಕಡಿಮೆ ಕೊಬ್ಬು ಮತ್ತು ಹೆಚ್ಚು ನಾರಿನಾಂಶ ಇರುವುದರಿಂದ ಹೊಟ್ಟೆ ತುಂಬಿದ ಭಾವನೆ ಹೆಚ್ಚು ಕಾಲ ಉಳಿಯುತ್ತದೆ. ಇದರಿಂದ ಅನಗತ್ಯ ಆಹಾರ ಸೇವನೆ ಕಡಿಮೆಯಾಗುವ ಸಾಧ್ಯತೆ ಇದೆ.

ಮಧುಮೇಹ ಸಮಸ್ಯೆ ಹೆಚ್ಚುತ್ತಿರುವ ಇಂದಿನ ಕಾಲದಲ್ಲಿ, ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುವ ಆಹಾರಗಳ ಮೇಲೆ ಹೆಚ್ಚು ಗಮನ ಹರಿಸಲಾಗುತ್ತಿದೆ. ಈ ಸಾಲಿನಲ್ಲಿ ಕಳಲೆಗಳೂ ಒಂದು ಅಗ್ರಸ್ಥಾನ ಪಡೆಯುತ್ತಿವೆ. ಆರೋಗ್ಯದ ಜತೆಗೆ ಪರಿಸರದ ದೃಷ್ಟಿಯಿಂದಲೂ ಬಿದಿರು ಒಂದು ಮಹತ್ವದ ಸಸ್ಯವಾಗಿದೆ. ಬಿದಿರು ವೇಗವಾಗಿ ಬೆಳೆಯುತ್ತದೆ, ಕಡಿಮೆ ಸಂಪನ್ಮೂಲಗಳಲ್ಲಿ ಬದುಕುತ್ತದೆ ಮತ್ತು ಪರಿಸರ ಸ್ನೇಹಿಯಾಗಿದೆ. ಹವಾಮಾನ ಬದಲಾವಣೆಯ ಬಗ್ಗೆ ವಿಶ್ವ ಚಿಂತಿಸುತ್ತಿರುವ ಈ ಸಂದರ್ಭದಲ್ಲಿ, ಬಿದಿರು ಆಧಾರಿತ ಆಹಾರಗಳಿಗೆ ಹೆಚ್ಚಿನ ಮಹತ್ವ ಸಿಗುತ್ತಿದೆ. ಆದರೆ, ತಜ್ಞರು ಒಂದು ಎಚ್ಚರಿಕೆಯನ್ನು ಕೂಡ ನೀಡಿದ್ದಾರೆ. ಕಚ್ಚಾ ಕಳಲೆಗಳನ್ನು ನೇರವಾಗಿ ತಿನ್ನಬಾರದು. ಸರಿಯಾದ ರೀತಿಯಲ್ಲಿ ಬೇಯಿಸಿ ಅಥವಾ -ರ್ಮೆಂಟ್ ಮಾಡಿದ ನಂತರವೇ ಸೇವಿಸಬೇಕು. ಪಾರಂಪರಿಕ ಅಡುಗೆ ವಿಧಾನಗಳ ಮಹತ್ವ ಇಲ್ಲಿ ಮತ್ತೊಮ್ಮೆ ಸಾಬೀತಾಗುತ್ತದೆ.

ಇಂದು ಜಗತ್ತು ಮತ್ತೆ ಪಾರಂಪರಿಕ ಆಹಾರಗಳತ್ತ ಮುಖ ಮಾಡುತ್ತಿದೆ. ಅರಿಶಿನ, ಸಜ್ಜೆ, ರಾಗಿ ಹೇಗೆ ಮರುಜನ್ಮ ಪಡೆದವೋ, ಅದೇ ರೀತಿಯಲ್ಲಿ ಕಳಲೆಗಳಿಗೂ ಹೊಸ ಗುರುತು ಸಿಗುವ ಸಾಧ್ಯತೆ ಇದೆ. ಅಡುಗೆ ಮನೆಯ ಒಂದು ಸಾಮಾನ್ಯ ಪದಾರ್ಥವಾಗಿದ್ದ ಕಳಲೆ, ನಾಳೆಯ ಆರೋಗ್ಯಕರ ಬದುಕಿನ ಪ್ರಮುಖ ಆಹಾರವಾಗಬಹುದು ಎಂಬ ನಿರೀಕ್ಷೆ ಈಗ ಹೆಚ್ಚುತ್ತಿದೆ.

**- ಕುಶಾಂಗಿ** ಪಟೇಲ್

# ನೀಟ್ ಆಗಿ ಪರೀಕ್ಷೆ ನಡೆಸುವುದೂ ಸತ್ವ ಪರೀಕ್ಷೆಯೇ!


**ದೇಶದ ಅತ್ಯುನ್ನತ ಪರೀಕ್ಷೆಗಳಲ್ಲಿ ಒಂದಾದ ನೀಟ್ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ವ್ಯವಸ್ಥೆಯ ಲೋಪ ಮತ್ತು ಕೆಲವರ ಹಿಡಿತದಲ್ಲಿ ಇಡೀ ವ್ಯವಸ್ಥೆ ಸಿಲುಕಿ ನಲುಗುತ್ತಿರುವುದಕ್ಕೆ ಜ್ವಲಂತ ಸಾಕ್ಷಿ ಮತ್ತು ಉದಾಹರಣೆ. ಒಟ್ಟಾರೆ ಈ ಇಡೀ ಘಟನೆ ದೇಶದ ಸ್ಪರ್ಧಾತ್ಮಕ ಪರೀಕ್ಷಾ ವ್ಯವಸ್ಥೆ ಮತ್ತು ಶಿಕ್ಷಣ ವ್ಯವಸ್ಥೆಯ ಕರಾಳ ಮತ್ತು ಕಳಪೆ ಮುಖ-ಗುಣಮಟ್ಟವನ್ನು ಬಯಲು ಮಾಡಿದೆ.**

ಅಗ್ನಿಪರೀಕ್ಷೆ ಮೊನ್ನೆ ಮೇ 3ರಂದು ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು ರದ್ದುಗೊಳಿಸಿ ಮತ್ತೆ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ! ಇದು ನಮ್ಮ ಪರೀಕ್ಷಾ ವ್ಯವಸ್ಥೆಯ ವೈಫಲ್ಯದ ಜೊತೆಗೆ ದೇಶದ ಶೈಕ್ಷಣಿಕ ವ್ಯವಸ್ಥೆಯ ಬುನಾದಿಯನ್ನೇ ಅಲುಗಾಡಿಸಿರುವ ಮತ್ತೊಂದು ವಿಷಣ್ಣ ಘಟನೆ. ಲಕ್ಷಾಂತರ ವಿದ್ಯಾರ್ಥಿಗಳ ಕನಸು, ನಿರಂತರ ಕಲಿಕೆ, ಓದು ಮತ್ತು ಪೋಷಕರ ಪ್ರಯತ್ನಗಳಿಗೆ ಬೆಲೆ ಇಲ್ಲದಂತಾಗಿರುವುದು ಮತ್ತು ಅವರೆಲ್ಲರೂ ಮತ್ತೆ ಪರೀಕ್ಷೆ ಬರೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ವಿಷಾದನೀಯ.

ದೇಶದ ಅತ್ಯುನ್ನತ ಪರೀಕ್ಷೆಗಳಲ್ಲಿ ಒಂದಾದ ನೀಟ್ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ವ್ಯವಸ್ಥೆಯ ಲೋಪ ಮತ್ತು ಕೆಲವರ ಹಿಡಿತದಲ್ಲಿ ಇಡೀ ವ್ಯವಸ್ಥೆ ಸಿಲುಕಿ ನಲುಗುತ್ತಿರುವುದಕ್ಕೆ ಜ್ವಲಂತ ಸಾಕ್ಷಿ ಮತ್ತು ಉದಾಹರಣೆ. ಒಟ್ಟಾರೆ ಈ ಇಡೀ ಘಟನೆ ದೇಶದ ಸ್ಪರ್ಧಾತ್ಮಕ ಪರೀಕ್ಷಾ ವ್ಯವಸ್ಥೆ ಮತ್ತು ಶಿಕ್ಷಣ ವ್ಯವಸ್ಥೆಯ ಕರಾಳ ಮತ್ತು ಕಳಪೆ ಮುಖ-ಗುಣಮಟ್ಟವನ್ನು ಬಯಲು ಮಾಡಿದೆ.

ಲಕ್ಷಗಳ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರೆಯುವ ಯಾವುದೇ ಪರೀಕ್ಷೆಯಾದರೂ ಅದನ್ನು ಸುಗಮವಾಗಿ, ಪಾರದರ್ಶಕವಾಗಿ ಮತ್ತು ಯಾವುದೇ ಅಡೆತಡೆ ಇಲ್ಲದೆ ನಡೆಸುವುದು ನಿಜವಾಗಿಯೂ ದೊಡ್ಡ ಸವಾಲು. ಹಾಗೆಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಪದೇ ಪದೇ ಈ ವಿಚಾರದಲ್ಲಿ ಎಡವುತ್ತಿರುವುದು, ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಟ್ಯೂಷನ್ ಮಾಫಿಯಾ, ವ್ಯವಸ್ಥಿತ ಭ್ರಷ್ಟಾಚಾರ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಕಪಿಮುಷ್ಟಿಯಲ್ಲಿ ಇಡೀ ಪರೀಕ್ಷಾ ವ್ಯವಸ್ಥೆ ಇರುವ ಲಕ್ಷಣಗಳಾಗಿ ಕಾಣುತ್ತದೆ.

ಕಳೆದ ಕೆಲ ವರ್ಷಗಳಲ್ಲಿ ಪರೀಕ್ಷೆಗಳು ರದ್ದಾಗುತ್ತಿರುವುದು ಇದು ಮೂರನೇ ಬಾರಿ ಎಂದರೆ ಇದರ ಹಿಂದಿನ ಕಿಂಗ್ ಪಿನ್‌ಗಳ ಪ್ರಭಾವದ ಅರಿವು ಮತ್ತು ಅವರನ್ನು ಏನೂ ಮಾಡಲಾಗದೇ ಕೈಚೆಲ್ಲಿ ಕುಳಿತಿರುವ ಹತಾಶ (ಅ)ವ್ಯವಸ್ಥೆ ನಮ್ಮದು ಎಂಬುದು ದಿಟ. ಈ ಘಟನೆಯು ಕೇಂದ್ರ ಸರ್ಕಾರದ ಅಧೀನದಲ್ಲಿರುವ ಶಿಕ್ಷಣ ಇಲಾಖೆಯ ಆಡಳಿತಾತ್ಮಕ ದಕ್ಷತೆ, ಸಾಮರ್ಥ್ಯ ಮತ್ತು ಶಿಸ್ತಿನ ಕುರಿತಾಗಿ ಗಂಭೀರ ಪ್ರಶ್ನೆಗಳನ್ನು ನಮ್ಮ ನಡುವೆ ಬಿತ್ತಿದೆ.



ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆಯಾಗುವುದು, ಮಾಡೆಲ್ ಪ್ರಶ್ನೆ ಪತ್ರಿಕೆ ಎನ್ನುವ ಹೆಸರಿನಲ್ಲಿ ಸಂಭಾವ್ಯ ಪ್ರಶ್ನೆ ಪತ್ರಿಕೆ ವಿದ್ಯಾರ್ಥಿಗಳಿಗೆ ಲಭಿಸುವುದು, ಮಾರಾಟವಾಗುವುದು, ಬಿಕರಿಯಾಗುವುದು... ಹೀಗೆ ಇದೊಂದು ವ್ಯವಸ್ಥಿತ ವಂಚನಾ ಜಾಲ.

ಕೋಟ್ಯಂತರ ರೂಪಾಯಿಗಳ ವಹಿವಾಟು ನಡೆಸುವ, ಪರೀಕ್ಷೆ ಪ್ರಶ್ನೆ ಪತ್ರಿಕೆ ಹೆಸರಿನಲ್ಲಿ ದುಡ್ಡು ಮಾಡುವ ಪರೀಕ್ಷಾ ಮಾಫಿಯಾ ದೇಶಾದ್ಯಂತ ಹೆಚ್ಚಿನ ಕಡೆಗಳಲ್ಲಿ ಸಕ್ರಿಯವಾಗಿದೆ. ಪ್ರಶ್ನೆ ಪತ್ರಿಕೆ ಮುದ್ರಣವಾಗುವಲ್ಲಿಂದ ತೊಡಗಿ, ಪ್ರಶ್ನೆ ಪತ್ರಿಕೆ ರವಾನೆ ಮತ್ತು ಪರೀಕ್ಷಾ ಕೇಂದ್ರದವರೆಗೆ ಎಲ್ಲಾ ಒಂದು ಕಡೆ ನಿರಂತರ ಸೋರಿಕೆ ನಡೆಯುತ್ತಿದೆ ಎಂದಾದರೆ, ಈ ಇಡೀ ವ್ಯವಸ್ಥೆಯ ಒಳಗಿನವರ ಸಹಭಾಗಿತ್ವ ಮತ್ತು ಕೈವಾಡವಿಲ್ಲದೆ ಇದು ಅಸಾಧ್ಯ.

ತಾಂತ್ರಿಕವಾಗಿ ನಾವು ಎಷ್ಟೇ ಮುಂದುವರಿದಿದ್ದೇವೆ ಎಂದು ಹೇಳಿಕೊಂಡರೂ, ಓಬೀರಾಯನ ಕಾಲದ ಪ್ರಶ್ನೆಪತ್ರಿಕೆ ಸಾಗಣೆ ಮತ್ತು ವಿತರಣಾ ಕ್ರಮಗಳನ್ನೇ ಇನ್ನೂ ಅನುಸರಿಸುವುದು ಈ ಎಲ್ಲಾ ಅಪಸವ್ಯಗಳಿಗೆ ಮೂಲ ಕಾರಣ.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾರದರ್ಶಕತೆ ಮತ್ತು ಶಿಸ್ತು ತರುವ ಸದುದ್ದೇಶ ಮತ್ತು ಮಹತ್ವಾಕಾಂಕ್ಷೆಯಿಂದ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು ಸ್ಥಾಪಿಸಲಾಯಿತು.

**(3 ನೇ ಪುಟಕ್ಕೆ ಮುಂದುವರೆದಿದೆ)**

